ಬೆಲೆ ರೂ.2.50
Date of posting - 15th of every month at BPC Udupi.

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2024

॥ ಧಿಯೋ ಯೋನಃ ಪ್ರಚೋದಯಾತ್ ॥

25 ಶ್ರೀಶಾರದಾ ಪತ್ರಿಕೆಗೆ ರಜತ ಸಂಭ್ರಮ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-25 ಸಂಚಿಕೆ-2 ಪುಟಗಳು-8 Registered Under No.UDP/1260/2024-2026

## ಅಯೋಧ್ಯಾ ಶ್ರೀ ರಾಮ ಪ್ರತಿಷ್ಠಾ ಮಹೋತ್ಸವದಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಸಂಭ್ರಮ



ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿ ಇವರ ಜಂಟಿ ಆಶ್ರಯದಲ್ಲಿ ಅಯೋಧ್ಯಾ ಶ್ರೀ ರಾಮ ಪ್ರತಿಷ್ಠಾ ಮಹೋತ್ಸವದ ಅಂಗವಾಗಿ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಶ್ರೀಮತಿ ಸುನಂದಾ ಹಾಗೂ ಶ್ರೀಮತಿ ಜಯಲಕ್ಷ್ಮಿಯವರು ಜೊತೆಯಾಗಿ ಸಂಜೆ ಸಾವಿರ ಜ್ಯೋತಿ ಬೆಳಗಿಸುವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಹಾಮಂಡಲದ ಅಧ್ಯಕ್ಷ ಮಂಜುನಾಥ ಹೆಬ್ಬಾರ್ ಸ್ವಾಗತಿಸಿದರು. ಹಿಂದೆ ಕರಸೇವಕರಾಗಿ ಸೇವೆಸಲ್ಲಿಸಿದ್ದ ಮೋಹನ್ ರಾವ್ ಚಿಟ್ಪಾಡಿ, ಕೆ ಮಂಜುನಾಥ ಹೆಬ್ಬಾರ್ ಕಬ್ಬಿನಾಲೆ, ಜಯಂತ್ ಹೆಬ್ಬಾರ್ ಕಬ್ಬಿನಾಲೆ, ರಾಧಾಕೃಷ್ಣ ಹೆಬ್ಬಾರ್ ಕಬ್ಬಿನಾಲೆ, ಮೊದಲಾದವರನ್ನು ಶಾಲು, ಹಾರ, ಫಲಪುಷ್ಪ, ಸನ್ಮಾನಪತ್ರ ಮತ್ತು ಸ್ಮರಣಿಕೆಗಳೊಂದಿಗೆ ಸನ್ಮಾನಿಸಲಾಯಿತು. ಕರಸೇವಕರಾದ ಮೋಹನ್ ರಾವ್ ಚಿಟ್ಪಾಡಿ ಮತ್ತು ಕೆ. ಮಂಜುನಾಥ ಹೆಬ್ಬಾರ್ ತಾವು ಕರಸೇವೆಯ ಸಂದರ್ಭದಲ್ಲಿ ಅನುಭವಿಸಿದ ಕಠಿಣ ಅನುಭವಗಳನ್ನು ಹಂಚಿಕೊಂಡರು. ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಸಾಮಾಜಿಕ ಮತ್ತು ಧಾರ್ಮಿಕ ಚಿಂತಕರಾದ ಪ್ರಕಾಶ್ ಮಲ್ಪೆಯವರು ರಾಮಾಯಣದ ಹಲವು ಸನ್ನಿವೇಶಗಳನ್ನು ಉದಾಹರಿಸಿ ಶ್ರೀರಾಮನ ಆದರ್ಶ ಗುಣಗಳನ್ನು ವರ್ಣಿಸುತ್ತಾ ಅವುಗಳನ್ನು ನಮ್ಮ ಜೀವನದಲ್ಲಿ ಹೇಗೆ ಸಮನ್ವಯಗೊಳಿಸಬಹುದೆಂಬ ಅಮೂಲ್ಯ ಮಾಹಿತಿಗಳನ್ನು ನೀಡಿದರು. ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿ, ಕೋಶಾಧಿಕಾರಿ ಗಣೇಶ್ ಹೆಬ್ಬಾರ್, ಮಹಾಮಂಡಲದ ಕಾರ್ಯದರ್ಶಿ ಮುರಳೀಧರ್ ಶರ್ಮ ನಿಟ್ಟೆ, ಕೋಶಾಧಿಕಾರಿ ಉದಯ ರಾವ್ ಬಾರ್ಕೂರು, ಸ್ಥಾಪಕಾಧ್ಯಕ್ಷ ಸಿ.ಎಸ್. ರಾವ್ ಚಿಟ್ಪಾಡಿ, ಉಪಾಧ್ಯಕ್ಷ ಪ್ರಭಾಕರ ರಾವ್ ಕಾಂತಾವರ, ಇನ್ನೋರ್ವ ಉಪಾಧ್ಯಕ್ಷ ಚಂದ್ರಶೇಖರ ರಾವ್ ಮೂಡಬಿದ್ರೆ, ನಿಕಟಪೂರ್ವ ಅಧ್ಯಕ್ಷ ದೇವಾನಂದ ಭಟ್ ಬೆಳುವಾಯಿ, ಜೊತೆ ಕಾರ್ಯದರ್ಶಿ ಕೇಶವರಾವ್ ಕಾರ್ಕಳ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಡುಪಿ ಸಂಘದ ಉಪಾಧ್ಯಕ್ಷ ಅರವಿಂದ ಕುಮಾರ್ ಧನ್ಯವಾದ ಸಲ್ಲಿಸಿದರು. ನಿರ್ದೇಶಕ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಣೆ ಮಾಡಿದರು.

## ಶೃಂಗೇರಿ ಶಾರದಾ ಪೀಠಕ್ಕೆ ನೂತನ ಆಡಳಿತಾಧಿಕಾರಿಯಾಗಿ ಬೆಂಗಳೂರಿನ ಪಿ.ಎ.ಮುರಳಿ ನೇಮಕ



ಶೃಂಗೇರಿ ಶಾರದಾ ಪೀಠದ ನೂತನ ಆಡಳಿತಾಧಿಕಾರಿ ಮತ್ತು ಸಿ.ಇ.ಓ ಆಗಿ ಬೆಂಗಳೂರಿನ ಪಿ.ಎ ಮುರಳಿ ಅವರನ್ನು ನೇಮಕ ಮಾಡಲಾಗಿದೆ. ಮಠದ ಈ ಹಿಂದಿನ ಗುರು ಅಭಿನವ ವಿದ್ಯಾತೀರ್ಥ ಸ್ವಾಮೀಜಿ ಅವರ ನಿರ್ದೇಶನದಂತೆ 1989ರಲ್ಲಿ ವಿ.ಆರ್. ಗೌರೀಶಂಕರ್ ಅವರನ್ನು ಶೃಂಗೇರಿ ಮಠದ ಆಡಳಿತಾಧಿಕಾರಿ ಮತ್ತು ಸಿ.ಇ.ಓ ಆಗಿ ನೇಮಕ ಮಾಡಲಾಗಿತ್ತು. ಗೌರಿ ಶಂಕರ್ ಅವರು 35 ವರ್ಷಗಳ ಕಾಲ ಮಠದ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಮುಂದಿನ ದಿನಗಳಲ್ಲಿ ಅವರು ನೂತನ ಆಡಳಿತಾಧಿಕಾರಿ ಮತ್ತು ಸಿ.ಇ.ಓ ಪಿ.ಎ ಮುರಳಿ ಅವರಿಗೆ ಮುಖ್ಯ ಸಲಹೆಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಜನವರಿ 25ರಿಂದ ಜಾರಿಗೆ ಬರುವಂತೆ ಪಿ.ಎ ಮುರಳಿ ಅವರನ್ನು ಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಆಡಳಿತಾಧಿಕಾರಿಯನ್ನಾಗಿ ಜಗದ್ಗುರು ಭಾರತೀ ತೀರ್ಥ ಸ್ವಾಮಿಗಳು ನೇಮಕ ಮಾಡಿದ್ದಾರೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ. ಪಿ.ಎ.ಮುರಳಿ ಅವರಿಗೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಕೃಪಾಶೀರ್ವಾದದೊಂದಿಗೆ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು 2023ರ ನವರಾತ್ರಿ ದರ್ಬಾರ್ ಸಂದರ್ಭದಲ್ಲಿ **ಗುರುಸೇವಾನಿರತ** ಎಂಬ ಬಿರುದನ್ನು ನೀಡಿರುತ್ತಾರೆ. 1986ರಲ್ಲಿ ಈ ಹಿಂದಿನ ಜಗದ್ಗುರುಗಳಾಗಿದ್ದ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ನೇಮಕ ಮಾಡಿದ್ದ ಗೌರಿ ಶಂಕರ್ ಅವರು ಇಲ್ಲಿಯವರೆಗೆ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಮಠದ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ಗೌರಿ ಶಂಕರ್ ಅವರಿಗೆ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿದ ದಿನವಾದ ಫೆಬ್ರವರಿ 12ರಂದು ಮಠದಲ್ಲಿ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿದೆ.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ಶೋಭಕೃತ್ ನಾಮ ಸಂ।ರದ ಕುಂಭ ಮಾಸ ದಿನ ೧೮ ಸಲುವ ತಾ.02-03-2024ನೇ ಶನಿವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

-ಆಡಳಿತ ಮಂಡಳಿ


ಕಾರ್ಯಕ್ರಮ

ಬೆಳಿಗ್ಗೆ ಗಂಟೆ 8-00ರಿಂದ : ಪ್ರಾರ್ಥನೆ, ಶ್ರೀ ಗಣಪತಿ ಹೋಮ, ನವಕಲಶಸ್ಥಾಪನ, ಅಧಿವಾಸ ಹೋಮ, ಕಲಶಾಭಿಷೇಕ, ರುದ್ರಾಭಿಷೇಕ, ಶ್ರೀಲಲಿತಾತ್ರಿಶತೀ ನಾಮಾರ್ಚನೆ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ.

ಸಾಯಂಕಾಲ 5-30ರಿಂದ : ಶ್ರೀ ಚಂಡೀ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನಾ ಕಾರ್ಯಕ್ರಮ, ಹೂವಿನ ಪೂಜೆ, ಪ್ರಸಾದ ವಿತರಣೆ.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.08-03-2024, ಶುಕ್ರವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 9 ಗಂಟೆಯಿಂದ ರುದ್ರಪಾರಾಯಣ, ರುದ್ರಾಭಿಷೇಕ, ಲಲಿತಾಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ



ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀರಾಮಲಲ್ಲಾ ಪ್ರಾಣ ಪ್ರತಿಷ್ಠೆ–ಶ್ರೀರಾಮ ಪಟ್ಟಾಭಿಷೇಕ

ಸಂಗ್ರಹ ಲೇಖನ : **ವೈ. ಮೋಹನ ರಾವ್**
ಅಂಚೆ ಚೀಟಿ ಸಂಗ್ರಹ : **ಎಂ.ಕೆ. ಕೃಷ್ಣಯ್ಯ**


**'ಶ್ರೀರಾಮ ಪಟ್ಟಾಭಿಷೇಕ' ಯಕ್ಷಗಾನದ ಹಾಡೊಂದು ಹೀಗಿದೆ :**

*ಪನ್ನೀರ ರಾಮನಿಗೆ ಪಂಕಜಾಕ್ಷಿಯರ್ಎರೆದು*
*ಪನ್ನೀರ ರಾಮನಿಗೆ ಪಂಕಜಾಕ್ಷಿಯರೆರೆದು*
*ಚಿನ್ನಗಳ ತೊಡಿಸಿದರು ಚಿನ್ಮಯಾತ್ಮಜಗೆ*
*ಚಿನ್ನಗಳ ತೊಡಿಸಿದರು ಚಿನ್ಮಯಾತ್ಮಜಗೆ*
*ಅಗರುಚಂದನಗಂಧ ಕಸ್ತೂ...ರಿ.......*
*ಅಗರುಚಂದನಗಂಧ ಕಸ್ತೂರಿಲೇಪನದ*
*ಸೊಗಸಾಗಿ ರಚಿಸಿದರು ಸಿಂಗಾರದಿಂದ*
*ಸೊಗಸಾಗಿ ರಚಿಸಿದರು ಸಿಂಗಾರದಿಂದ*
*ಪನ್ನೀರ ರಾಮನಿಗೆ ಪಂಕಜಾಕ್ಷಿಯರೆರೆದು*

ರಾಮಃಶಸ್ತ್ರಭೃತಾಮಹಮ್–ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದು. ಶಸ್ತ್ರ ಹಿಡಿದುಕೊಂಡವರಲ್ಲಿ ರಾಮ ನಾನೇ. ಆಯುಧದಿಂದ ಹೋರಾಡುವವರಲ್ಲಿ ನಾನು ರಾಮನೆಂದು ಹೆಸರಾಗಿದ್ದೇನೆ. ರಾಮಬಾಣ ಏನೆಂದರೆ ನಮಗೆ ಗೊತ್ತು. ಶರವತ್ ತನ್ಮಯೋ ಭವತ್. ಬಾಣದಂತೆ ಗುರಿಯಲ್ಲಿ ತನ್ಮಯನಾಗಿರು ಎಂದು ಉಪನಿಷತ್ ಹೇಳುತ್ತದೆ. ರಾಮ ಎಂಬ ಪದ ಸೂರ್ಯನ ಸಾಕ್ಷಾತ್ ರೂಪ ಎನ್ನುವ ಮಾತಿದೆ. ರಾಮವಂಶ ಸೂರ್ಯವಂಶ ಅಂದರೆ ರಘುವಂಶ. ರಾಮನು ಮರ್ಯಾದಾ ಪುರುಷೋತ್ತಮನು. ಏಕಪತ್ನಿ



ವ್ರತಸ್ಥ. ಪಿತೃವಾಕ್ಯ ಪರಿಪಾಲಕ. ರಾಮ ಕರುಣಾಮಯಿ. ರಾಮ ಪ್ರೇಮಮಯಿ. ಭ್ರಾತೃಪ್ರೇಮ, ಸತ್ಯ–ಧರ್ಮ ಪರಾಯಣತೆ ಇವು ಆಗ ಮುಖ್ಯವಾಗಿದ್ದು. ಪ್ರಜೆಗಳನ್ನು ತನ್ನ ಮಕ್ಕಳಂತೆ ಪರಿಪಾಲಿಸಿದ ರಾಜಧರ್ಮ ಪರಿಪಾಲಕ. ತನ್ನ ರಾಜ್ಯದಲ್ಲಿ ಪ್ರಜೆಗಳ ಅಭಿಮತಕ್ಕೆ ಮತ ಕೊಡುವವನು. ಸುಖ,




ಸಂಪತ್ತು, ನೆಮ್ಮದಿಗಳಿಂದ ಕೂಡಿದ್ದ ರಾಮನ ರಾಜ್ಯ ಧರ್ಮದ ಬೀಡಾಗಿತ್ತು. ಆದ್ದರಿಂದ ಅದು ರಾಮರಾಜ್ಯ.

ತ್ರೇತಾಯುಗದಲ್ಲಿ ರಾಮ ಮತ್ತು ದ್ವಾಪರ ಯುಗದಲ್ಲಿ ಕೃಷ್ಣ ಎರಡು ನಾಮಗಳು. ಕಲಿಯುಗದಲ್ಲಿ ರಾಮ ಎಂದರೆ ಆರಾಮ ಮತ್ತು ಕೃಷ್ಣ ಎಂದರೆ ಕಷ್ಟವಿಲ್ಲ.

(3ನೇ ಪುಟಕ್ಕೆ...)

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

**ಸಲಹೆಗಾರರು :**
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ



ತಾ.22.01.2024ರಂದು ಬೆಳ್ವಾಯಿ ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿ ಸಂಸ್ಥೆಗೆ ಉಡುಪಿ ಗೀತಾ ಪರ್ಯಾಯದ ಪುತ್ತಿಗೆ ಶ್ರೀಗಳು ಫಲಮಂತ್ರಾಕ್ಷತೆ ಪೂರ್ವಕ ಆಶೀರ್ವಾದ ನೀಡಿದ ಸಂದರ್ಭ.

## ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ)

## ನವೀಕೃತ ಸಭಾಭವನದ ಉದ್ಘಾಟನೆ



ದಿನಾಂಕ 20.01.2024ರಂದು ಬೆಳ್ತಂಗಡಿ ಸಭಾದ ನವೀಕೃತ ಸಭಾಭವನದಲ್ಲಿ ಸಂಜೆ ರಾಕ್ಷೋಘ್ನ ಹೋಮ, ವಾಸ್ತುಪೂಜೆ ನಡೆಸಲಾಯಿತು. ದಿ.21.01.2024ರಂದು ಬೆಳಿಗ್ಗೆ ಗಣಹೋಮ, ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನಡೆಸಿ ಧಾರ್ಮಿಕ ಸಭೆಯನ್ನು ಆಯೋಜಿಸಲಾಗಿತ್ತು. ಸ್ಥಾನಿಕ ಮಹಾ ಮಂಡಲದ ನಿಕಟಪೂರ್ವ ಅಧ್ಯಕ್ಷರಾದ ದೇವಾನಂದ ಭಟ್ರವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಬಂದ ಪ್ರಯುಕ್ತ ಹಾಗೂ ಕು. ತನುಶ್ರೀ ರವರು ಸರಿಗಮಪ 19ನೇ ಸೀಸನ್ ನಲ್ಲಿ 2ನೇ ರನ್ನರ್ ಅಪ್ ಆದ ಬಗ್ಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಭಾದ ನವೀಕೃತ ಸಭಾ ಭವನವನ್ನು ಉದ್ಘಾಟಿಸಿದ ಸ್ಥಾನಿಕ ಮಹಾಮಂಡಲದ ಪ್ರಸ್ತುತ ಅಧ್ಯಕ್ಷರಾದ ಕುಚ್ಚೂರು ಮಂಜುನಾಥ್ ಹೆಬ್ಬಾರ್ರವರು ಮಾತನಾಡಿ ನಮ್ಮ ಸಮಾಜದ ಕಾರ್ಯಕ್ರಮ ಮಾಡಲು ನಮಗೆ ಕಟ್ಟಡಬೇಕು. ಈಗ ಕೆಲವು ಸಂಘಗಳಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ.

(5ನೇ ಪುಟಕ್ಕೆ...)



ಪುತ್ತಿಗೆ ಮಠದ ವಿಶ್ವ ಗೀತಾ ಪರ್ಯಾಯದ ಅವಧಿಯಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯವರಿಂದ ತಾ.27.01.2024ರಂದು ಉಡುಪಿಯ ಗೀತಾ ಮಂದಿರದಲ್ಲಿ ಅಖಂಡ ಉದಯಾಸ್ತಮಾನ ಗೀತಾ ಪಾರಾಯಣ ಕಾರ್ಯಕ್ರಮ ನಡೆಯಿತು.



ತಾ.16.01.2023ರಂದು ಪರ್ಯಾಯ ಪುತ್ತಿಗೆ ಮಠದ ಕಿರಿಯ ಶ್ರೀಪಾದರು ನಮ್ಮ ಶ್ರೀ ಶಾರದಾ ದೇವಸ್ಥಾನಕ್ಕೆ ಆಗಮಿಸಿದ ಸಂದರ್ಭ.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016-17ರಿಂದ 2021-22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

## ಶ್ರೀರಾಮಲಲ್ಲಾ ಪ್ರಾಣ ಪ್ರತಿಷ್ಠೆ–ಶ್ರೀರಾಮ ಪಟ್ಟಾಭಿಷೇಕ

■...2ನೇ ಪುಟದಿಂದ

ಕಲಿಯುಗದಲ್ಲಿ ಈ ಎರಡು ನಾಮಗಳು ಪ್ರಮುಖವಾದವುಗಳು. ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ, ವಿಠಲನಾಮ ತುಪ್ಪ ಬೆರಸಿ ಬಾಯ ಚಪ್ಪರಿಸಿರೋ ಎಂದು ದಾಸಶ್ರೇಷ್ಠರಾದ ಪುರಂದರ ದಾಸರು ತಮ್ಮ ಸಂಕೀರ್ತನೆಯಲ್ಲಿ ನುಡಿದಿದ್ದಾರೆ.

ಅಯೋಧ್ಯೆಯು ಜಗತ್ತಿನ ಆದಿಕಾವ್ಯವಾದ ರಾಮಾಯಣದಲ್ಲಿ ವಾಲ್ಮೀಕಿ ಮಹರ್ಷಿಗಳು ವರ್ಣಿಸಿದ ಪವಿತ್ರ ನಗರ. ಈಗ ಅದು ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಒಂದು ಪಟ್ಟಣ. ಕುಶನ ಆಳ್ವಿಕೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಯಿತು ಎಂದು ಹೇಳಲಾಗುತ್ತದೆ. ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ದೇವಾಲಯದ ಪುನರುತ್ಥಾನವಾಯಿತು ಎಂಬ ಪ್ರತೀತಿ ಇದೆ. ರಾಮಾಯಣದಲ್ಲಿ ಅದು ರಾಮನ ಜನ್ಮಸ್ಥಳ. ಬಹಳ ಕಾಲದಿಂದಲು ಅದು ಹಿಂದೂಗಳ ಪವಿತ್ರ ಯಾತ್ರಾ ಸ್ಥಳ. ರಾಮ ಈ ಭೂಮಿಯಿಂದ ನಿರ್ಗಮಿಸಿದ್ದು ಸರಯೂ ನದಿಯ ಮೂಲಕ.

ಮನುಕುಲದ ಮೊದಲ ರಾಜಧಾನಿ ಅಯೋಧ್ಯೆ. ಶಾಂತಿಪ್ರಿಯರ ನಗರ ಅಯೋಧ್ಯೆ. ಮೋಕ್ಷದಾಯಕ ಸಪ್ತನದಿಗಳಲ್ಲಿ ಮೊದಲನೆಯದು ಅಯೋಧ್ಯೆ. ಯುದ್ಧದ ಕಲ್ಪನೆಯನ್ನೂ ಮಾಡದಿರುವಂತಹ ಶಾಂತಿಪ್ರಿಯರ ನಗರ ಎಂಬ ಕಾರಣಕ್ಕೆ ಅಯೋಧ್ಯೆ ಎಂಬ ಹೆಸರು ಇದೆ. ಅಯೋಧ್ಯೆ ಎಂದರೆ ಅಜೇಯ ಅಥವಾ ಅಭೇದ್ಯ. ವಿಷ್ಣುವಿನ ಏಳನೇ ಅವತಾರವಾದ ಶ್ರೀರಾಮ ಇಲ್ಲಿನ ಮಹಾರಾಜ ದಶರಥ–ಕೌಸಲ್ಯೆಯರ ಪುತ್ರನಾಗಿ ಜನ್ಮ ತಾಳಿದ್ದರಿಂದ ಈ ಸ್ಥಳವನ್ನು 'ರಾಮಜನ್ಮಭೂಮಿ' ಎಂದು ಕರೆಯುತ್ತಾರೆ.

ಸಾವಿರದ ಐನೂರ ಎಂಟರಲ್ಲಿ ಮೊಘಲರು ಅಯೋಧ್ಯೆಯನ್ನು ವಶಪಡಿಸಿಕೊಂಡ ಅನಂತರ ಶ್ರೀರಾಮನ ಜನ್ಮಸ್ಥಳದಲ್ಲಿ ಇದ್ದಿದ್ದ ದೇಗುಲವನ್ನು ಬಾಬರನ ಆದೇಶದಂತೆ ಧ್ವಂಸಗೊಳಿಸಿದ ಆತನ ಸೇನಾನಿ ಮೀರ್‌ಬಾಕಿ ಬಾಬರಿ ಮಸೀದಿ ಕಟ್ಟಿಸಿದ. ಆ ಜಾಗದಲ್ಲಿ ಮತ್ತೆ ರಾಮನ ದೇಗುಲ ನಿರ್ಮಾಣವಾಗಬೇಕು ಮತ್ತು ಆ ಮೂಲಕ ಮರ್ಯಾದಾ ಪುರುಷೋತ್ತಮನಿಗೆ ಸಿಗಬೇಕಾದ ಧಾರ್ಮಿಕ ಪೂಜೆ ಪುರಸ್ಕಾರಗಳು ದೊರಕಬೇಕೆಂಬ ಆಶಯವನ್ನು ವಿಶ್ವಹಿಂದೂ ಪರಿಷತ್ ಮತ್ತು ಅನೇಕ ಹಿಂದೂ ಸಂಘಟನೆಗಳದ್ದಾಗಿತ್ತು. ಈ ಧ್ವನಿಗೆ ಎಲ್ಲಾ ಹಿಂದೂಗಳು ಪ್ರತಿಧ್ವನಿ ನೀಡಿದರು. ಇದಕ್ಕೆ ರಾಜಕೀಯ ಅಭಿಯಾನದ ಸ್ಪರ್ಶ ಕೊಟ್ಟದ್ದು ಬಿ.ಜೆ.ಪಿ.

'ಶ್ರೀರಾಮ ಜಯರಾಮ ಜಯಜಯರಾಮ' ವಿಜಯ ಮಹಾಮಂತ್ರವನ್ನು ಸಾಮೂಹಿಕವಾಗಿ ನೂರೆಂಟು ಬಾರಿ ಜಪ ಮಾಡುವುದು. ಇದರ ಜೊತೆಗೆ ಹನುಮಾನ್ ಚಾಲಿಸಾ, ಸುಂದರಕಾಂಡ ಪಾರಾಯಣ, ರಾಮರಕ್ಷಾಸ್ತೋತ್ರದ ಪಠಣಗಳನ್ನೂ ಜೋಡಿಸಿಕೊಳ್ಳಬಹುದು ಎಂದು 'ವಿಶ್ವದ ಎಲ್ಲಾ ರಾಮ ಭಕ್ತರಲ್ಲಿ ಒಂದು ನಿವೇದನೆ'ಯಲ್ಲಿ ತಿಳಿಸಲಾಗಿದೆ.

ಶ್ರೀ ಹನುಮಾನ್ ಚಾಲಿಸಾ ಈ ಸ್ತೋತ್ರವನ್ನು ರಚಿಸಿದವರು ಗೋಸ್ವಾಮಿ ತುಲಸೀದಾಸ. ರಾಮಾಯಣದ ಪುಟಗಳಲ್ಲಿ ಕಾಣಬರುವ ಮಹೋನ್ನತ ವ್ಯಕ್ತಿತ್ವ ಎಂದರೆ ಶ್ರೀಹನುಮಾನ್. ಅವನ ಅಪ್ರತಿಮ ಚಾರಿತ್ರ್ಯ ಶುದ್ಧಿ, ಅವನ ಮೇರು ಅಧ್ಯಾತ್ಮಿಕ ವ್ಯಕ್ತಿತ್ವ, ಬ್ರಹ್ಮಚರ್ಯವನ್ನು ಪಾಲಿಸುವುದು, ಗುರುವಿನಲ್ಲಿ ವಿಧೇಯತೆ ಮತ್ತು ಹೃದಯ ಭಕ್ತಿ ಇವುಗಳು ತುಲಸೀದಾಸರು ನಮಗೆ ನೀಡಿದ ವರವಾದ ಈ ಹನುಮಾನ್ ಚಾಲಿಸಾ ಪ್ರತಿಯೊಬ್ಬರ ಮನೆಯಲ್ಲಿ ಇರಬೇಕು. ಪ್ರತಿಯೊಬ್ಬರೂ ಪ್ರತಿದಿನ ಇದನ್ನು ಓದುವಂತಾಗಬೇಕು.

ಅಂಜನಾಮಾತೆ ಮತ್ತು ಕೇಸರಿಯ ಪುತ್ರ ಹನುಮಂತ. ಇವನು ಯಾವಾಗಲೂ ಶ್ರೀರಾಮಚಂದ್ರನ ಕೆಲಸವನ್ನು ಮಾಡಲು ಸದಾ ಸಿದ್ಧನಾಗಿರುವವನು. 'ಹನುಮಾನ್ ಚಾಲಿಸಾ'ದ ಮೊದಲ ಸ್ತೋತ್ರ :

*ಶ್ರೀಗುರು ಚರನ ಸರೋಜ ರಜ, ನಿಜ ಮನು ಮುಕುರು ಸುಧಾರಿ ।*

*ಬರನೌ ರಘುವರ ವಿಮಲ ಜಸು, ಜೋ ದಾಯಕು ಫಲಚಾರೀ ॥*

ನನ್ನ ಪೂಜ್ಯ ಗುರುಗಳ ಚರಣಕಮಲಗಳ ಧೂಳಿನಿಂದ ನನ್ನ ಮನಸೆಂಬ ಕನ್ನಡಿಯನ್ನು ನಾನು ಶುಚಿಗೊಳಿಸಿಕೊಂಡು, ರಘುಕುಲ ಶ್ರೇಷ್ಠನಾದ ಶ್ರೀರಾಮಚಂದ್ರನ ನಿರ್ಮಲವಾದ ಕೀರ್ತಿಯ ಚರಿತ್ರೆಯನ್ನು ಹೇಳುತ್ತೇನೆ.

*ಪ್ರಭು ಚರಿತ್ರ ಸುನಿಬೇ, ಕೋ ರಸಿಯಾ ।*
*ರಾಮ ಲಖನ ಸೀತಾ, ಮನ ಬಸಿಯಾ ॥*

ನೀನು ಪ್ರಭು ರಾಮಚಂದ್ರನ ಗುಣಗಾನವನ್ನು ಕೇಳುತ್ತಿರುವುದರಲ್ಲಿ ಹರ್ಷ ಹೊಂದುತ್ತಿ. ನಿನ್ನ ಹೃದಯದಲ್ಲಿ ಶ್ರೀರಾಮಚಂದ್ರ, ಸೀತಾಮಾತೆ ಮತ್ತು ಲಕ್ಷ್ಮಣ, ಇವರು ವಾಸವಾಗಿದ್ದಾರೆ.

*ಪ್ರಭುಮುದ್ರಿಕಾ ಮೇಲಿ, ಮುಖ ಮಾಹೀಂ ।*
*ಜಲಧಿ ಲಾಂಘಿ ಗಯೇ, ಅಚರಜ ನಾಹೀಂ ॥*

ನೀನು ಪ್ರಭು ರಾಮಚಂದ್ರನ ಮುದ್ರೆಯುಂಗುರವನ್ನು ಬಾಯಲ್ಲಿ ಇಟ್ಟುಕೊಂಡು ಸಮುದ್ರವನ್ನು ದಾಟಿದುದು ಆಶ್ಚರ್ಯವೇನೂ ಇಲ್ಲ.

*ಲಾಯ ಸಜೀವನ, ಲಖನ ಜಿಯಾಯೇ ।*
*ಶ್ರೀರಘುಬೀರ, ಹರಷಿ ಉರ ಲಾಯೇ ॥*

ನೀನು ಸಂಜೀವಿನಿ ಗಿಡವನ್ನು ತಂದು ಲಕ್ಷ್ಮಣನನ್ನು ಬದುಕಿಸಿದೆ. ಆಗ ಶ್ರೀರಾಮನು ಆನಂದದಿಂದ ನಿನ್ನನ್ನು ಅಪ್ಪಿಕೊಂಡನು. ನೀನು ಸಹೋದರ ಭರತನ ಸಮಾನ ಎಂದು ರಾಮ ಹೇಳಿದನು.

*ಪವನತನಯ ಸಂಕಟಹರನ, ಮಂಗಲಮೂರತಿ ರೂಪ ।*
*ರಾಮ–ಲಖನ–ಸೀತಾಸಹಿತ, ಹೃದಯ ಬಸಹು ಸುರಭೂಪ ॥*

ವಾಯುಪುತ್ರನೂ, ಸಂಕಟಗಳನ್ನೆಲ್ಲಾ ಕಳೆಯುವವನೂ, ಸುಂದರವಾದ ರೂಪ ಉಳ್ಳವನೂ, ದೇವತೆಗಳ ಒಡೆಯನೂ ಆದ ಹನುಮಂತನು ಶ್ರೀರಾಮ, ಲಕ್ಷ್ಮಣ, ಸೀತೆಯರ ಒಡಗೂಡಿ ನನ್ನ ಹೃದಯದಲ್ಲಿ ನೆಲೆಸಲಿ.

'ಶ್ರೀ ರಾಮರಕ್ಷಾಸ್ತೋತ್ರ'ದ ಕೆಲವು ಶ್ಲೋಕಗಳು

*ಏತಾಂ ರಾಮಬಲೋಪೇತಾಂ ರಕ್ಷಾಂ ಯಃ ಸುಕೃತೀ ಪಠೇತ್ ।*
*ಸ ಚಿರಾಯುಃ ಸುಖೀ ಪುತ್ರೀ ವಿಜಯೀ ಭವೇತ್ ॥*

ರಾಮನ ಸಾಮರ್ಥ್ಯವನ್ನೆಲ್ಲ ತುಂಬಿಕೊಂಡ ಈ ರಕ್ಷಾಸ್ತೋತ್ರವನ್ನು ಪಠಿಸುವ ಪುಣ್ಯವಂತನು ದೀರ್ಘಾಯುವು, ಸುಖಿಯು, ಮಕ್ಕಳೊಂದಿಗನು, ಜಯಶಾಲಿಯು, ವಿನಯಶಾಲಿಯು ಆಗುವನು.

*ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।*
*ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥*

ರಾಮ, ರಾಮಭದ್ರ, ರಾಮಚಂದ್ರ, ವಿಧಾತೃಸ್ವರೂಪ, ರಘುನಾಥ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಸೀತಾಪತಿಗೆ ನಮಸ್ಕಾರವಿರಲಿ.

*ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ ।*
*ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ॥*

ಭಜಕರಿಗೆ ಒದಗುವ ಸಂಕಟಗಳನ್ನು ನಿವಾರಿಸುವವನು, ಸರ್ವಸಂಪತ್ತುಗಳನ್ನು ಕೊಡುವವನು ಮತ್ತು ಜನರಿಗೆ ಆನಂದವನ್ನುಂಟುಮಾಡುವವನೂ ಆದ ಶ್ರೀರಾಮಚಂದ್ರನನ್ನು ನಾನು ಮತ್ತೆ ಮತ್ತೆ ನಮಸ್ಕರಿಸುವೆ.

ರಾಮನಿಗೆ 16 ವರ್ಷವಾಗಿದ್ದಾಗ ಮಹರ್ಷಿ ವಿಶ್ವಾಮಿತ್ರರು ಅಯೋಧ್ಯೆಗೆ ಬಂದು ರಾಮ–ಲಕ್ಷ್ಮಣರನ್ನು ತಮ್ಮ ಯಾಗದ ಸಂರಕ್ಷಣೆಗಾಗಿ ಕರೆದೊಯ್ಯುತ್ತಾರೆ. ಮಹರ್ಷಿ ವಿಶ್ವಾಮಿತ್ರ ಹಾಗೂ ರಾಮ–ಲಕ್ಷ್ಮಣರು ಒಂದು ರಾತ್ರಿ ದಂಡಕಾರಣ್ಯದಲ್ಲಿ ತಂಗಿದ್ದರು. ವಿಶ್ವಾಮಿತ್ರರು ಮರುದಿನ ಬೆಳಗ್ಗೆ ರಾಮ–ಲಕ್ಷ್ಮಣರನ್ನು 'ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೆ, ಉತ್ತಿಷ್ಠ ನರಶಾರ್ದೂಲ, ಕರ್ತವ್ಯಂ ದೈವಮಾಹ್ನಿಕಮ್ । ಎನ್ನುವ ಪ್ರಸಿದ್ಧ ಶ್ಲೋಕದೊಂದಿಗೆ ಎಚ್ಚರಗೊಳಿಸಿದರು. ಹತ್ತು ಸಾವಿರ ಆನೆಗಳ ಬಲವಿದ್ದ ರಾಕ್ಷಸಿ ತಾಟಕಿಯನ್ನು ರಾಮ ಸಂಹರಿಸಿದ್ದೂ ಇಲ್ಲಿಯೇ. ಅನಂತರ ರಾಕ್ಷಸರ ಮೇಲೆ ತೀಕ್ಷ್ಣ ಬಾಣ ಪ್ರಯೋಗ ಮಾಡಿದಾಗ ಸುಬಾಹು ಅಲ್ಲಿಯೇ ಸಾವನ್ನಪ್ಪಿ, ಮಾರೀಚ ಅಲ್ಲಿಂದ ದೂರ ಹೋಗಿ ಬೀಳುತ್ತಾನೆ.

ವಕ್ರಕಾಲಿನ ಡೊಂಕಿ, ಗುಡ್ಡೆಗಣ್ಣಿನ ಕೊರಕಿ, ಗೂನು ಬೆನ್ನಿನ ಮಂಥರೆ, ಇಂದ್ರನ ಅರಮನೆಯನ್ನು ನಾಚಿಸುವ ಚಂದ್ರಕಾಂತಿ ಶಿಲಾಗೋಪುರದ ಅರಮನೆಯ ಉಪ್ಪರಿಗೆಯ ಮೇಲೆ ನಿಂತು ಅಯೋಧ್ಯೆಯ ಸಂಭ್ರಮವನ್ನು ನೋಡಿ ಅಚ್ಚರಿಪಟ್ಟಳು ಕುಬ್ಜೆ. ಲಗುಬಗೆಯಿಂದ ಅವಳು ಕೈಕೇಯಿಯ ಅಂತಃಪುರಕ್ಕೆ ಬಂದಳು. ರಾಮನ ಪಟ್ಟಾಭಿಷೇಕದ ಮಾತನ್ನು ಅವಳು ಹೇಳಿದಳು. ರಾಮನಿಗೆ ಪಟ್ಟಾಭಿಷೇಕಕ್ಕೆ ಸಿದ್ಧವಾಗಿರುವ ಮುಹೂರ್ತದಲ್ಲಿ ರಾಮನ ಬದಲಿಗೆ ಭರತನಿಗೆ ಪಟ್ಟ ಕಟ್ಟುವಂತೆ ಹಾಗೂ ರಾಮನಿಗೆ ಹದಿನಾಲ್ಕು ವರ್ಷ ವನವಾಸ ದೀಕ್ಷೆ





ವಿಧಿಸಲು ಕೈಕೇಯಿ ಎರಡು ವರಗಳನ್ನು ದಶರಥನಲ್ಲಿ ಕೇಳಿಕೊಂಡಳು.

ರಾಮನು ಶೂರ್ಪಣಕಿಯ ಕಿವಿ, ಮೂಗು ಕತ್ತರಿಸಲು ಲಕ್ಷ್ಮಣನಿಗೆ ಸೂಚಿಸಿದಂತೆ ಲಕ್ಷ್ಮಣನು ಮಾನದ ಮೂಗುತಿಯಾದ ಮೂಗು, ಕಿವಿಗಳನ್ನು ಕತ್ತರಿಸಿದನು. ಶೂರ್ಪಣಕಿ ಲಂಕೆಗೆ ಓಡಿದಳು. ಅಣ್ಣ ಲಂಕಾಧೀಶ ರಾವಣನಲ್ಲಿ ದೂರಿಕೊಂಡಳು. ಆಗ ತಡಮಾಡದೆ ಮಾವ ಮಾರೀಚನ ಆಶ್ರಮಕ್ಕೆ ತೆರಳಿ ಸೀತಾಪಹರಣಕ್ಕೆ ಅವನ ಸಹಾಯ ಯಾಚಿಸಿದನು.

ಹನುಮಂತನಿಗೆ ರಾಮನ ದರ್ಶನವಾಗುವುದು ರಾಮನು ವನವಾಸ (ಪಂಚವಟಿ) ದಲ್ಲಿದ್ದಾಗ. ಶ್ರೀರಾಮನನ್ನು ದೂರದಿಂದಲೇ ನೋಡಿದ ಸುಗ್ರೀವ, ತನ್ನ ಸೋದರ ವಾಲಿಯ ಕಡೆಯವರೆಂದು ನನಗಾಗಿ ಭೇಟಿ ಮಾಡಲು ಇಲ್ಲಿಗೆ ಬಂದಿದ್ದಾರೆ ಎಂದು ಭಾವಿಸುತ್ತೇನೆ. ಶ್ರೀರಾಮನ ಬಳಿ ಹೋಗಿ ನಿಜವಾದ ವಿಷಯವನ್ನು ತಿಳಿದುಕೊಳ್ಳಲು ತನ್ನ ಮಂತ್ರಿ ಹನುಮನನ್ನು ಸುಗ್ರೀವ ಕಳುಹಿಸುತ್ತಾನೆ. ಹನುಮಂತನು ಆಡಿದ ಮೊದಲ ಮಾತುಗಳಿಂದಲೇ ಹನುಮನು ಅವರ ಹೃದಯವನ್ನು ಗೆಲ್ಲುತ್ತಾನೆ. ಹನುಮನ ಸುಸಂಸ್ಕೃತವಾದ ಮಾತುಗಳನ್ನು ಕೇಳಿ ಶ್ರೀರಾಮನು ತಾನು ಯಾರೆಂದು ತಿಳಿಸುತ್ತಾನೆ. ಹನುಮ ಆತನಿಗೆ ಸಾಷ್ಟಾಂಗವೆರಗುತ್ತಾನೆ. ಈ ಪ್ರಸಂಗದ ನಂತರ ಹನುಮನ ಜೀವನ ಶ್ರೀರಾಮನ ಬದುಕಿನೊಂದಿಗೆ ಹಾಸುಹೊಕ್ಕಾಗಿ ಬಿಡುತ್ತದೆ.

ಮುಂದೆ, ರಾಮನ ವನವಾಸದಲ್ಲಿ ಮಾರೀಚನೇ ಚಿನ್ನದ ಜಿಂಕೆಯಾಗಿ ಬಂದು ಸೀತೆಯನ್ನು ಅಪಹರಿಸಲು ರಾವಣನಿಗೆ ನೆರವಾಗುತ್ತಾನೆ. ರತ್ನಖಚಿತವಾದ ಹಾಗೂ ಪುಷ್ಪಗಳಿಂದಲೇ ಅಲಂಕೃತವಾದ 'ಪುಷ್ಪಕವಿಮಾನ'ದ ಮೂಲಕ ಸೀತೆಯನ್ನು ಹೊತ್ತೊಯ್ಯುತ್ತಿದ್ದ ರಾವಣನೊಂದಿಗೆ ಜಟಾಯು ಯುದ್ಧ ಮಾಡುತ್ತಾನೆ. ರಾಮನಿಗೆ ಜಾನಕಿಯು ಮತ್ತೆ ದೊರಕುತ್ತಾಳೆ ಎಂದು ಹೇಳಿ ಅಸುನೀಗುತ್ತಾನೆ. ಜಾಂಬವಂತನು 'ನಾವು ಹೊರಟಿರುವುದು ರಾಮನ ಕೆಲಸಕ್ಕೆ. ಈ ಶತಯೋಜನ ವಿಸ್ತೀರ್ಣದ ಮಹಾಸಾಗರವನ್ನು ಹಾರು. ದಾಟು' ಎಂದು ಹುರಿದುಂಬಿಸಿದನು. ಕೋಟಿ ಕೋಟಿ ಯೋಜನಾ ದೂರದಲ್ಲಿರುವ ಸೂರ್ಯನನ್ನು ಹಣ್ಣೆಂದು ಬಗೆದು ಬಾಲ್ಯದಲ್ಲಿ ಹಾರಿದ್ದೂ ನೆನಪಾಗಿ ಈ ಮಹಾಸಾಗರ ಏನು ಮಹಾ ಎಂದು 'ಜೈ ಶ್ರೀರಾಮ್' ಎನ್ನುತ್ತಾ ಹನುಮನು ಹಾರಿಯೇ ಬಿಟ್ಟನು.

ಅಹಲ್ಯಾ ಶಾಪ ವಿಮೋಚನೆ, ಶಬರಿ ರಾಮಭಕ್ತಿ, ರಾಮಸೇತು ನಿರ್ಮಾಣದಲ್ಲಿ 'ಅಳಿಲು' ಸೇವೆ ಇತ್ಯಾದಿ ರಾಮನ ಕರುಣೆಗಳು.

ಶ್ರೀರಾಮಚಂದ್ರನ ಹತ್ತಿರ ಅಗಸ್ತ್ಯ ಮಹರ್ಷಿಗಳು ಬಂದು ಸನಾತನ ರಹಸ್ಯವನ್ನು ಹೇಳುತ್ತಾರೆ. ಶತ್ರುವನ್ನು ಸಂಹಾರ ಮಾಡಲು (ರಾವಣನನ್ನು ಸಂಹರಿಸಲು) 'ಆದಿತ್ಯ ಹೃದಯಂ' ಮಂತ್ರವನ್ನು (31 ಸ್ತೋತ್ರಗಳು) ಬೋಧಿಸುತ್ತಾರೆ. ಉದಾಹರಣೆಗೆ, ಆದಿತ್ಯ ಹೃದಯಂ ಪುಣ್ಯಂ, ಸರ್ವಶತ್ರು ವಿನಾಶನಂ । ಜಯಾವಹಂ ಜಪೇನಿತ್ಯಂ, ಅಕ್ಷಯಂ ಪರಮಂ ಶಿವಂ ॥ ಅಂದರೆ, 'ಆದಿತ್ಯ ಹೃದಯ' ಎಂಬ ಈ ಪುಣ್ಯಕರವಾದ ಸ್ತೋತ್ರವು ಶತ್ರುಗಳನ್ನು ನಾಶಪಡಿಸುತ್ತದೆ, ದಿನನಿತ್ಯ ಜಪ ಮಾಡಿದರೆ ಸದಾ ಜಯವನ್ನು ಕೊಡುತ್ತದೆ, ಶಾಶ್ವತವಾದ ಮತ್ತು ಮಂಗಳಕರವಾದ ಪರಮ ಫಲವನ್ನು ನೀಡುತ್ತದೆ.

*ರಾಮ ರಾಮ ಮಹಾಬಾಹೋ, ಶೃಣುಗುಹ್ಯಂ ಸನಾತನಂ ।*
*ಯೇನಸರ್ವಾನರಿಜನ್ ವತ್ಸ, ಸಮರೇ ವಿಜಯಿಷ್ಯಸಿ ॥*

ಅಂದರೆ ಮಹಾವೀರನಾದ (ಮಹಾಬಾಹೋ) ರಾಮಚಂದ್ರನೇ, ನಾನು ಹೇಳುವ ಈ ಸನಾತನ ರಹಸ್ಯವನ್ನು ಶ್ರದ್ಧೆಯಿಂದ ಆಲಿಸು. ಇದರಿಂದ ನಿನ್ನ ಶತ್ರುವನ್ನು ಯುದ್ಧದಲ್ಲಿ ಜಯಿಸಬಹುದು.

ಆದಿತ್ಯನನ್ನು ನೋಡುತ್ತಾ ಆದಿತ್ಯ ಹೃದಯವನ್ನು ಜಪಿಸಿ ಶ್ರೀರಾಮನು ಮೂರು ಸಲ ಆಚಮನ ಮಾಡಿ, ಶುಚಿರ್ಭೂತನಾಗಿ ಯುದ್ಧ ಮಾಡಲು ಸಿದ್ಧನಾಗಿ ಆ ರಾವಣನ ಸಂಹಾರದಲ್ಲಿ ಸಂಕಲ್ಪ ಮಾಡಿದನು. ಆದ್ದರಿಂದ ಆದಿತ್ಯ ಹೃದಯ ಎಂಬ ಮಂತ್ರಕ್ಕೆ ಮಹತ್ವ ಬಂತು. ಮಂಗಳಕರವಾದ ಸ್ತೋತ್ರಗಳಲ್ಲಿ ಇದು ಶ್ರೇಷ್ಠವಾದುದು. ಆದಿತ್ಯ ಹೃದಯದ ಉಪದೇಶಕ್ಕಾಗಿಯೇ ರಾಮನ ಬಳಿ ಅಗಸ್ತ್ಯ ಮಹಾಮುನಿಗಳು ಬಂದದ್ದು. ದುಷ್ಟ ಶಿಕ್ಷಣದ ಮಹಾಕಾರ್ಯದಲ್ಲಿ ದೈವ ಬಲದ ಜೊತೆ ತಮ್ಮ ತಪೋಬಲದ ಪ್ರೋತ್ಸಾಹವನ್ನು ಅವರು ನೀಡಿದರು. ಈ ಸ್ತೋತ್ರವು ರಾಮಾಯಣದ ಯುದ್ಧಕಾಂಡದಲ್ಲಿ ಬರುತ್ತದೆ.

2019 ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತು–'ರಾಮನಿಗೆ ಜನ್ಮಭೂಮಿ'. ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ಐವರು ನ್ಯಾಯಮೂರ್ತಿಗಳಿಂದ ಸರ್ವಾನುಮತದ ತೀರ್ಪು ಬಂತು. ಆದ್ದರಿಂದ ದೇಗುಲ ಕಟ್ಟಲು ಕೇಂದ್ರದ ನೇತೃತ್ವದಲ್ಲಿ ಟ್ರಸ್ಟ್ ರಚನೆಯಾಯಿತು. ಅಯೋಧ್ಯೆಯಲ್ಲಿ ಮತ್ತೆ ರಾಮಯುಗ. ಕೋಟ್ಯಾನುಕೋಟಿ ಹಿಂದೂಗಳ ಮಹಾಸ್ವಪ್ನವಾಗಿರುವ ಅಯೋಧ್ಯೆ ಈಗ ನಿಜವಾಗಿ 'ಅಯೋಧ್ಯಾ ರಾಮೋತ್ಸವ' ಸಂಭ್ರಮ ಸಂಪನ್ನಗೊಂಡಿತು. ಶ್ರೀರಾಮ ಮಂದಿರ 2020 ಬುಧವಾರ ಮಧ್ಯಾಹ್ನ 12.30ಕ್ಕೆ ಭೂಮಿ ಪೂಜೆ ಮತ್ತು 12.44ಕ್ಕೆ ಮೊದಲ ಬೆಳ್ಳಿ ಇಟ್ಟಿಗೆಯನ್ನು ಭಾರತದ ಪ್ರಧಾನಿ ಮೋದೀಜಿಯವರು ಪ್ರತಿಷ್ಠಾಪಿಸಿದರು. ಶ್ರೀರಾಮ ಸೂರ್ಯವಂಶದ ಮಹಾರಾಜನೂ ಆಗಿರುವುದರಿಂದ ಮಧ್ಯಾಹ್ನದ ಹೊತ್ತಿನಲ್ಲಿ ನೆತ್ತಿ ಮೇಲಿನಿಂದ ಸೂರ್ಯನಿಂದಲೇ ಆಶೀರ್ವಾದ ಲಭಿಸಿದಂತಾಯಿತು. 1700 ವರ್ಷಗಳಷ್ಟು ಪುರಾತನವಿರುವ ಅಯೋಧ್ಯೆಯಲ್ಲಿ ಹನುಮಾನ್ ಗಢಿಯಿದೆ. ಅಯೋಧ್ಯೆಯು ಶ್ರೀರಾಮನ ಸನ್ನಿಧಾನಕ್ಕೆ ಕಿಷ್ಕಿಂಧೆಯ ವೀರಹನುಮನೇ ಕಾವಲುಗಾರ ಎಂದು ನಂಬುಗೆ ಇದೆ. ಭಗವಾನ್ ಹನುಮನ ಅನುಮತಿ ಇಲ್ಲದೆ ಯಾರೂ ರಾಮಲಲ್ಲಾನ ಸನ್ನಿಧಿಗೆ ಪ್ರವೇಶಿಸುವಂತಿಲ್ಲ.

ದಿನಾಂಕ, 22.01.2024ರಂದು, ಸೋಮವಾರ ಬೆಳಗ್ಗೆ 11.00ರಿಂದ ಮಧ್ಯಾಹ್ನ 1.00ರ ಮಧ್ಯದಲ್ಲಿ ಶ್ರೀ ರಾಮಲಲ್ಲಾನ (ಬಾಲರಾಮನ) ಪ್ರಾಣ ಪ್ರತಿಷ್ಠಾಪನೆ ಸಂಪನ್ನವಾಯಿತು. ದೇಶವಿಡೀ ಈ ಸಂದರ್ಭದಲ್ಲಿ ಅಭೂತಪೂರ್ವ ಸಂಭ್ರಮದಲ್ಲಿ ಭಾಗಿಯಾಯಿತು. ಪೂರ್ವ ಜನ್ಮಗಳ ಸುಕೃತ ಫಲವೋ ಏನೋ ನಮಗೆ ಈ ಜನ್ಮದಲ್ಲಿ ಶ್ರೀರಾಮನ ಪಟ್ಟಾಭಿಷೇಕದಂತಿರುವ ಶ್ರೀರಾಮಲಲ್ಲಾನ 'ಪ್ರಾಣ ಪ್ರತಿಷ್ಠೆ'ಯ ಅಮೃತ ಘಳಿಗೆ ಲಭಿಸಿತು. ಈ ಅಮೃತ ಘಳಿಗೆಗೆ ಕಾರಣರಾದ ಮುಖ್ಯವಾಗಿ ನಮ್ಮ ದೇಶದ ಪ್ರಧಾನಿ ಮೋದೀಜಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗೀಜಿ, 'ಭಾರತ ರತ್ನ' ಮಹೋನ್ನತ ಪ್ರಶಸ್ತಿಗೆ ಭಾಜನರಾದ ಶ್ರೀ ಲಾಲ್‌ಕೃಷ್ಣ ಅದ್ವಾನಿ, ಶ್ರೀರಾಮ ಜನ್ಮಭೂಮಿ ಟ್ರಸ್ಟ್, ವಿಶ್ವಹಿಂದೂ ಪರಿಷತ್, ಕರಸೇವಕರು, ರಾಮ ಭಕ್ತರು ಮತ್ತು ರಾಮ ಸೇವಕರಿಗೆಲ್ಲಾ ಸಪ್ರೇಮ ಪ್ರಣಾಮಗಳು.



# ನರಸಿಂಹ ಗಡ (ಗಡಾಯಿಕಲ್ಲು) ಚಾರಣ



ದಿನಾಂಕ 14.01.2024 ಮಕರ ಸಂಕ್ರಮಣದ ಪರ್ವಕಾಲ ಪ್ರಾತಃ ಕಾಲದಲ್ಲಿ ಗಂಟೆ 5.15ಕ್ಕೆ ಸುಮಾರು 24 ಜನ ಸ್ಥಾನಿಕ ಬಾಂಧವರು ಬೆಳ್ತಂಗಡಿಯ ನಮ್ಮ ಸಭಾದ ಎದುರು ಸೇರಿದ್ದರು. ಚುಮು ಚುಮು ಚಳಿಯಲ್ಲಿ ಯೂ ಏನೋ ಉತ್ಸಾಹ ಅವರಲ್ಲಿ ಕಂಡುಬರುತ್ತಿತ್ತು. ಇವರು ಬೇರಾರೂ ಅಲ್ಲ. ನಮ್ಮ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ, ಇದರ ಬೆಳ್ತಂಗಡಿ ವಲಯದ ಸ್ಥಾನಿಕ ಬಂಧುಗಳು ನರಸಿಂಹ ಗಡಕ್ಕೆ ಚಾರಣ ಹೊರಟ ಪರಿ.

ಮೆಟ್ಟಿಲು, ನೇರವಾಗುತ್ತಾ ಹೋಗುತ್ತದೆ. ಅದನ್ನು ನೇರವಾಗಿ ಹತ್ತಲು ಪ್ರಯತ್ನಿಸಿದರೆ ಹಿಂದೆ ವಾಲಿ ಬೀಳುವ ಸ್ಥಿತಿ ಇದೆ. ಅದಕ್ಕಾಗಿ ಅದನ್ನು ನಾಲ್ಕು ಕಾಲಿನಲ್ಲಿ ಯಾ ಮುಂದಕ್ಕೆ ಸ್ವಲ್ಪ ಬಾಗಿ ಏರಿದರೆ ಸುಲಭವಾಗುತ್ತದೆ. 8.45 ಕ್ಕೆ ನಮ್ಮ ಉತ್ಸಾಹಿಗಳ ತಂಡ ತುದಿಯನ್ನು ತಲುಪಿತು. 9.00ಗಂಟೆಗೆ ಕೊನೆಯ ತಂಡವೂ ಸೇರಿಕೊಂಡಿತು. ಮೇಲಿನಿಂದ ಚಂದ್ಕೂರು ದೇವಸ್ಥಾನ, ಲಾಯಿಲ ಗ್ರಾಮದ ಮನೆಗಳು, ರಸ್ತೆ, ನದಿಯನ್ನು ನೋಡಿ ಗುರುತಿಸಿದೆವು. ಇಲ್ಲೆಯೇ ಟಿಪ್ಪು ಡ್ರಾಪ್ ಇದೆ. ಇಲ್ಲಿರುವ

**ನರಸಿಂಹ ಗಡ (ಗಡಾಯಿಕಲ್ಲು)ಕ್ಕೆ ಚಾರಣ ಹೋಗುವವರಿಗೆ ಕೆಲವೊಂದು ಕಿವಿ ಮಾತು :**

1. **ಬೆಳಿಗ್ಗೆ 6.45ಕ್ಕೆ ನರಸಿಂಹಗಡದ ಪ್ರವೇಶ ದ್ವಾರದ ಬಳಿ ಇರಬೇಕು. ತಡವಾದರೆ ಬಿಸಿಲಿನಲ್ಲಿ ಬಸವಳಿಯಬೇಕಾಗುತ್ತದೆ.**
2. **ಬೆಳಿಗ್ಗೆ ಸ್ವಲ್ಪ ಮಟ್ಟಿಗೆ ಉಪಹಾರ ಮಾಡಿಯೇ ಬರುವುದು ಒಳ್ಳೆಯದು.**
3. **ಸಣ್ಣ ಕೈಚೀಲದಲ್ಲಿ ಮಿಠಾಯಿ, ಬಿಸ್ಕಿಟ್, ನೀರು ತರುವುದು ಒಳಿತು. ಪ್ಲಾಸ್ಟಿಕ್ ಬಾಟಲ್ (ಬಿಸಾಡುವ) ತರದಿದ್ದರೆ ಒಳ್ಳೆಯದು.**
4. **ನಾಲ್ಕರಿಂದ ಐದು ಅಡಿ ಉದ್ದದ ಊರುಗೋಲು ಇದ್ದರೆ ಸ್ವಲ್ಪ ವಯಸ್ಸಾದವರಿಗೆ ಆಧಾರವಾಗುವುದರೊಂದಿಗೆ ಸ್ವಲ್ಪ ಆಯಾಸ ಕಡಿಮೆಯಾಗುತ್ತದೆ.**

5.45 ಕ್ಕೆ ಅಲ್ಲಿಂದ ಹೊರಟು ನರಸಿಂಹ ಗಡ ದತ್ತ 5 ಕಾರುಗಳಲ್ಲಿ ಸಾಗಿದೆವು. ನಾನೂ ಒಬ್ಬ ಧರ್ಮಸ್ಥಳ ವಲಯದಿಂದ ಭಾಗವಹಿಸಿದ್ದೆ. 6.00 ಗಂಟೆಗೆ ನರಸಿಂಹಗಡದ ಬುಡಕ್ಕೆ ತಲುಪಿದೆವು. ಸರಿಯಾಗಿ 7.00 ಗಂಟೆಗೆ ಒಳಗೆ ಬಿಡುತ್ತಾರೆ. ನಮ್ಮನ್ನು 6.45ಕ್ಕೆ ಒಳಗೆ ಬಿಟ್ಟರು. ಒಬ್ಬರು ಅರಣ್ಯ ಇಲಾಖೆಯ ಸಿಬ್ಬಂದಿ ಅಲ್ಲಿರುತ್ತಾರೆ. ಆನ್ ಲೈನ್ ಮೂಲಕ ನೋಂದಾಯಿಸಲು ತಿಳಿಸುತ್ತಾರೆ. ನೋಂದಾವಣೆ ಅಂದಕೂಡಲೇ ವಯಸ್ಕರಿಗೆ ತಲಾ ರೂ. 50–00, ಮಕ್ಕಳಿಗೆ (5ವರ್ಷ ದಾಟಿದವರಿಗೆ) ರೂ. 25–00 ರಂತೆ ಶುಲ್ಕ ಪಾವತಿಸಿ ನಮ್ಮ ಪಯಣವನ್ನು ಮೇಲ್ಮುಖವಾಗಿ ಆರಂಭಿಸಿದೆವು. ಹೊರಡುವಾಗ ನಿಮ್ಮಲ್ಲಿ ಎಷ್ಟು ಪ್ಲಾಸ್ಟಿಕ್ ನೀರಿನ ಬಾಟಲ್ ಇದೆ ಎಂದು ಕೇಳಿ ನಮೂದಿಸಿಕೊಳ್ಳುತ್ತಾರೆ ಹಿಂದಿರುಗಿ ಬರುವಾಗ ಅಷ್ಟೇ ಬಾಟಲಿಗಳನ್ನು ತರಬೇಕೆಂದಿದೆ. ಅಂದರೆ ಪರಿಸರ ಹಾಳುಮಾಡಬಾರದೆಂಬ ಉದ್ದೇಶಕ್ಕಾಗಿ. ಮಕ್ಕಳು ಮತ್ತು ಯುವಕರು ವೇಗವಾಗಿ ಸಾಗಿ ಅಲ್ಲಲ್ಲಿ ಕುಳಿತು, ಎದ್ದು, ಸಾಗಿದರು. ಕೆಲವರು ಆರಂಭದಿಂದಲೇ ನಾಲ್ಕು ಕಾಲಿನಲ್ಲಿ ಏರುತ್ತಿದ್ದರು.

ತುದಿಗೆ ಸುಮಾರು ಒಂದು ಕಿಲೋಮೀಟರ್‌ನಷ್ಟು ದೂರವಿದೆಯೆಂದಾಗ ಕೆರೆಯಲ್ಲಿ ನೀರು ತುಂಬಿಕೊಂಡಿದೆ. ಮೇಲ್ಭಾಗದಲ್ಲಿ ಮುಳಿಹುಲ್ಲು ಹುಲುಸಾಗಿ ಬೆಳೆದಿದೆ. ಒಂದು ಗಂಟೆಗಳ ಕಾಲ ಫೋಟೋ ಶೂಟಿಂಗ್, ಮನೆ, ನದಿಗಳ ಹುಡುಕಾಟದಲ್ಲಿ ಕಳೆದು 10.00 ಗಂಟೆಗೆ ಹಿಂದಕ್ಕೆ ಹೊರಟೆವು.

ಆಗಲೂ ಮಕ್ಕಳೇ ಮೊದಲಿಗರು. ಮೊದಲ ತಂಡ ಕೆಳಗೆ ತಲುಪುವಾಗ 10.30 ಗಂಟೆ ಕೊನೆಯ ತಂಡ ತಲುಪುವಾಗ 11.00 ಗಂಟೆ. ಹಿಂದಕ್ಕೆ ಬರುವಾಗ 2 ಗೋಣಿ ಚೀಲಗಳಲ್ಲಿ ಯಾರೋ ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲ್, ಪ್ಲಾಸ್ಟಿಕ್ ಲಕೋಟೆಗಳನ್ನು ಹೆಕ್ಕಿಕೊಂಡು ಬಂದು ಅದಕ್ಕಾಗಿಯೇ ಕೆಳಗೆ ಇರಿಸಿದ್ದ ಜಾಗಕ್ಕೆ ತಲುಪಿಸಿದೆವು. ಅರಣ್ಯ ವಸತಿಗೃಹದ ಬಳಿ 2 ಬಿದಿರು, 2 ಹಲಸಿನ ಗಿಡ ನೆಟ್ಟು ನಮ್ಮ ಸಭಾದತ್ತ ಮರುಪ್ರಯಾಣ ಬೆಳೆಸಿದೆವು. ಅಲ್ಲಿ ದಿಶಾ ಫುಡ್ ಕಾರ್ನರ್ ನಿಂದ ಬಂದ ಉಪಹಾರ ರೆಡಿ ಇತ್ತು. ಸರಿಯಾಗಿ ತಿಂದು ಮನೆಯತ್ತ ಸಾಗಿದೆವು. ಚಾರಣ ಎಲ್ಲರಿಗೂ ಖುಷಿಯನ್ನು ನೀಡಿತು. ಗುಡ್ಡಹತ್ತುವ ಸಾಮರ್ಥ್ಯ ಯಾರಿಗೆ ಎಷ್ಟಿದೆ ಎಂಬುದನ್ನು ಒರೆಗೆ ಹಚ್ಚಲು ಅವಕಾಶವಾಯಿತು. ಬೆಳಿಗ್ಗೆ ಹೊರಡುವಾಗ ತಲೆಗೆ ಟೊಪ್ಪಿ, ಸ್ವೆಟರ್ ಹಾಕಿಕೊಂಡಿದ್ದವರು ಮಧ್ಯೆ ದಾರಿಯಲ್ಲೇ ಕಳಚಿ ಹೆಗಲಿಗೆ ಬಂದಿತ್ತು. ಬೆವರು ಬೇಕಾದಷ್ಟು ಹರಿಯಿತು.


## ಬೇಕಾಗಿದ್ದಾರೆ

**ಬಿಸಿರೋಡ್‌ನಲ್ಲಿರುವ ಫಾರ್ಮ್‌ಹೌಸ್ ನೋಡಿಕೊಳ್ಳಲು ಕೃಷಿಯಲ್ಲಿ ಅನುಭವವಿರುವ ಬ್ರಾಹ್ಮಣ ಕುಟುಂಬ ಬೇಕಾಗಿದೆ.**

**ಮೊಬೈಲ್ : 9448260225**


# ಅಯೋಧ್ಯೆ ಕರಸೇವಕ ಶ್ರೀ ಚಿಟ್ಪಾಡಿ ಮೋಹನರಾವ್



ಉಡುಪಿ ಚಿಟ್ಪಾಡಿ ಸರಸ್ವತಿ ಮತ್ತು ಶ್ರೀನಿವಾಸ ರಾವ್ ಅವರ 8 ಜನ ಮಕ್ಕಳಲ್ಲಿ ಮೂರನೆಯವರಾದ ಮೋಹನ್ ರಾವ್ ಸದಾ ಅಂತರ್ಮುಖಿ ಹಾಗೂ ಚಿಂತನಾ ಸ್ವಭಾವದವರಾಗಿದ್ದರು. ಹೈಸ್ಕೂಲ್‌ನಲ್ಲಿರುವಾಗಲೇ ಶ್ರೀಮದ್ ಭಗವದ್ಗೀತೆಯನ್ನು ಓದುವ, ಅರ್ಥೈಸುವ ಪ್ರಯತ್ನ ಮಾಡಿದವರಾಗಿದ್ದು ಉಡುಪಿಯಲ್ಲಿ ಡಾ। ವಿ.ಎಸ್. ಆಚಾರ್ಯರ ನಗರಸಭಾ ಅವಧಿಯಲ್ಲಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿ ಗೆಲುವಿಗೆ ಕಾರಣರಾದರು. ಎಳವೆಯಲ್ಲಿಯೇ ಸಾಮಾಜಿಕ, ಧಾರ್ಮಿಕ, ಚಟುವಟಿಕೆಯಲ್ಲಿ ಆಸಕ್ತರಾಗಿದ್ದು ಸ್ವಾಮಿ ವಿವೇಕಾನಂದರ ಸಮಗ್ರ ಜೀವನ ಅಧ್ಯಯನದಿಂದ ಪ್ರೇರಣೆ ಪಡೆದರು. ಕ್ರಾಂತಿಕಾರಿ ಕಾರ್ಯದಲ್ಲಿ ಆಸಕ್ತರಾದ ಶ್ರೀಯುತರು ಹೊ.ವೆ. ಶೇಷಾದ್ರಿಯವರಿಂದ ಆಕರ್ಷಿತರಾಗಿ ಬೆಂಗಳೂರಿನ "ಕೇಶವ ಕೃಪಾ"ದಲ್ಲಿ ತುರ್ತು ಪರಿಸ್ಥಿತಿ ಸಂದರ್ಭ ಭೇಟಿಯಾಗಿ ಬಂಧಿತರಾಗಿ ಸೆರೆಮನೆವಾಸ ಅನುಭವಿಸಿದರು. ಆ ಸಂದರ್ಭದಲ್ಲಿ ಎಲ್.ಕೆ.ಅಡ್ವಾಣಿ, ವಾಜಪೇಯಿ, ಮಧುದಂಡವತೆ ಮೊದಲಾದ ನಾಯಕರ ಸಹವಾಸ ಪಡೆದರು. 2 ತಿಂಗಳ ಬಳಿಕ ಬಿಡುಗಡೆ ಹೊಂದಿದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ "ವಿರಾಟ್ ಹೋರಾಟ" ಪ್ರತಿಕ್ರಿಯೆಯ ಜವಾಬ್ದಾರಿಯನ್ನು ನಿರ್ವಹಿಸಿದರು. ಬೆಂಗಳೂರಿನ ಕೇಂದ್ರ ಕಾರಾಗ್ರಹದಲ್ಲಿ 2ನೇ ಬಾರಿ ಸೆರೆಮನೆವಾಸ ಅನುಭವಿಸಿದರು. ಡಾ। ವಿ.ಎಸ್. ಆಚಾರ್ಯರ ಜೊತೆ ಹಲವಾರು ಮಹನೀಯರ ಸಂಪರ್ಕ ಪಡೆದರು. ತುರ್ತು ಪರಿಸ್ಥಿತಿಯಲ್ಲಿ ಹೊಟೇಲ್‌ನಲ್ಲಿ ಮೆನೇಜರ್ ಹುದ್ದೆಯೊಂದಿಗೆ ಸಂಘದ ಕಾರ್ಯದಲ್ಲಿಯೂ ಭಾಗಿಯಾಗುತ್ತಿದ್ದರು.

ಜಿಲ್ಲಾ ಸಂಘ ಕಾರ್ಯವಾಹಕರಿಂದ ಹಿ.ಪ. ಘಟಕ ಪ್ರಾರಂಭ ಕಾರ್ಯ ವಿಸ್ತರಣೆ, ಕಾಲೇಜು ಯುವಕರಿಗಾಗಿ ಎ.ಬಿ.ವಿ.ಪಿ. ಪ್ರಾರಂಭದಲ್ಲಿ ಯುವಕರ ಜೋಡಣೆ, ವಿ.ಹಿ.ಪ. 2 ತಾಲೂಕುಗಳ ಸಂಘಟನಾ ಜವಬ್ದಾರಿಯೊಂದಿಗೆ ತಾಲೂಕು ಬೌದ್ಧಿಕ್ ಪ್ರಮುಖನಾಗಿ ಸೇವೆ ಮಾಡಿದರು. ಹಿಂದೂ ಸೇವಾ ಪ್ರತಿಷ್ಠಾನ ದಶಮಾನೋತ್ಸವ ಕಾರ್ಯದಲ್ಲಿ ಸ್ವರ್ಣವಲ್ಲಿ ಶ್ರೀಗಳಿಂದ ಮೆಚ್ಚುಗೆ ಪಡೆದರು. ಅವರ ಪತ್ನಿಯನ್ನು ರಾಷ್ಟ್ರ ಸೇವಿಕಾ ಸಮಿತಿ ರಚನೆ ಆರ್.ಎಸ್.ಎಸ್.ನ ಪ್ರಮುಖ ತರಬೇತಿ ಶಿಬಿರ ಒ.ಟಿ.ಸಿ (2ರಲ್ಲಿ) ಜವಾಬ್ದಾರಿ ನಿರ್ವಹಣೆಯೊಂದಿಗೆ ಶ್ರೀರಾಮ ಜಾನಕೀ ರಥಯಾತ್ರೆ, ಶ್ರೀರಾಮಶಿಲಾ, ಶ್ರೀರಾಮಜ್ಯೋತಿ ನೇತೃತ್ವ ವಹಿಸಿ ಪ್ರಯಾಗ್‌ರಾಜ್, ಕಾಶೀ ವಿಶ್ವನಾಥ ಮಂದಿರ ದರ್ಶಿಸಿ ಅಯೋಧ್ಯೆಯ ಕರಸೇವೆಯಲ್ಲಿ ದೈಹಿಕವಾಗಿ ಭಾಗಿಯಾಗಿ ಪ್ರಾತಃಕಾಲ ಶ್ರೀರಾಮಚಂದ್ರನ ಬಿಂಬ ದರ್ಶನ ಮಾಡಿ ಕರಸೇವೆಯ ಯುದ್ಘೋಷಾದಿಯ ಸನ್ನಿವೇಶ ಎದುರಿಸಿ ಜೀವಂತ ಪಾರಾಗಿ ಬಂದ ಅನುಭವ ಶ್ರೀಯುತ ಮೋಹನರಾಯರದು. 2003ರಲ್ಲಿ ಕೋಟಿ ರಾಮನಾಮ ಯಜ್ಞವನ್ನು ದಾಂಡೇಲಿಯಲ್ಲಿ ನಡೆಸಿದುದು, 9 ಜನರ ತಂಡದಲ್ಲಿ ಅಕ್ಟೋಬರ್ 17ರ ಅಯೋಧ್ಯ ಚಲೋದಲ್ಲಿ ಭಾಗಿಯಾಗಿ ಬಂಧನವಾಗಿರುವುದು, ಮರುದಿನ ಬಿಡುಗಡೆಯಾಗಿರುವುದು ಹೀಗೆ ಅವರ ಜೀವನವೆಂಬುದು ಸಮಾಜಸೇವೆಗೆ ಮುಡಿಪಾಗಿರುತ್ತದೆ. ಅವರ ಈ ಅನನ್ಯ ಸೇವೆಯನ್ನು ಗುರುತಿಸಿ ಸ್ಥಾನಿಕ ಮಹಾಮಂಡಲ ಮತ್ತು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದಿಂದ ಅವರನ್ನು ಸನ್ಮಾನಿಸಲಾಯಿತು.

# ಶ್ರೀ ರಾಮನಾಮ ತಾರಕ ಯಜ್ಞ



ಅಯೋಧ್ಯೆಯ ಶ್ರೀ ರಾಮ ಪ್ರತಿಷ್ಠೆಯ ಶುಭ ದಿನದಂದು ಶ್ರೀ ಹರಿಕೃಷ್ಣ ರಾವ್‌ರವರ ಸ್ವಗೃಹದಲ್ಲಿ ಶ್ರೀ ರಾಮನಾಮ ತಾರಕ ಯಜ್ಞ ನಡೆಸಲಾಯಿತು. ನಮ್ಮವರೇ ಆದ ಹಿರಿಯಡ್ಕದ ಶ್ರೀಮತಿ ಜಯಭಾರತಿಯವರು, ಶ್ರೀ ರಾಮ ಸೀತಾ ಲಕ್ಷ್ಮಣ ಮತ್ತು ಹನುಮಂತನ ವಿಗ್ರಹವನ್ನು ಈ ಹೋಮ ಕಾರ್ಯಕ್ರಮದೊಂದಿಗೆ ತಂದು ಪ್ರಾಣ ಪ್ರತಿಷ್ಠೆಯ ಸುಮುಹೂರ್ತದಲ್ಲೇ ವಿಶೇಷ ಪೂಜೆಸಲ್ಲಿಸಿದರು. ಬಂದ ಭಕ್ತಜನರಿಗೆ ಶ್ರೀ ರಾಮರಕ್ಷಾ ಸ್ತೋತ್ರದ ಪುಸ್ತಕಗಳನ್ನು ನೀಡಲಾಯಿತು. ಪೂರ್ಣಾಹುತಿ ಸಮಯದಲ್ಲಿ ಹೋಮದ ಜ್ವಾಲೆಯು 'ರಾಮಮಂದಿರದ' ರೂಪವನ್ನು ಪಡೆದು ಭಕ್ತರ ಜೈ ಶ್ರೀ ರಾಮ ಉದ್ಘೋಷಕ್ಕೆ ಕಾರಣವಾಯಿತು. ನೆರೆಹೊರೆಯವರು, ಬಂಧು ಬಾಂಧವರು, ಕಾನೂನು ವಿದ್ಯಾಲಯದ ಎಲ್ಲರೂ ಈ ಶುಭ ಸಮಾರಂಭಕ್ಕೆ ಆಗಮಿಸಿ ಶ್ರೀರಾಮನ ಕೃಪೆಗೆ ಪಾತ್ರರಾದರು.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



**ಪ್ರೊ : ನಯನಾಭಿರಾಮ ಸ್ವಾಮಿ**
**ಮೊಬೈಲ್ : 9449101303, 9632500864**

## ಉದಯಾದ್ರಿ ಕೆಟರರ್ಸ್

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

## ನವೀಕೃತ ಸಭಾಭವನದ ಉದ್ಘಾಟನೆ

■...2ನೇ ಪುಟದಿಂದ

ಆಗ ಕಾರ್ಯಕ್ರಮ ನಡೆಸಲು ಆಸಕ್ತಿ ಬರುವುದಿಲ್ಲ. ನೀವು ಅತ್ಯುತ್ತಮವಾದ ಕಟ್ಟಡವನ್ನು ರಚಿಸಿಕೊಂಡಿದ್ದೀರಿ. ಆದ್ದರಿಂದ ನಿಮ್ಮಲ್ಲಿ ನಿರಂತರವಾಗಿ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಮಹಾಮಂಡಲದ ನೇತೃತ್ವದಲ್ಲಿ ಬೆಳ್ತಂಗಡಿ ಸಭಾದ ಆಶ್ರಯದಲ್ಲಿ ಸ್ಥಾನಿಕ ಸಮಾವೇಶ ಅತ್ಯಂತ ಯಶಸ್ವಿಯಾಗಿ ನಡೆದಿದೆ. ನಿಮ್ಮಲ್ಲಿ ಸಭಾದ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಇದು ಸಾಧ್ಯವಾಯಿತು ಎಂದರು. ಮುಂದುವರಿಸಿ ಮಹಾಮಂಡಲದ ಅಧ್ಯಕ್ಷರಾಗಿ ನನ್ನನ್ನು ನೀವೆಲ್ಲರೂ ಸೇರಿ ಮಾಡಿದ್ದೀರಿ. ಮುಖ್ಯವಾಗಿ ಬ್ರಾಹ್ಮಣ ಸಂಪ್ರದಾಯಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ ಸಹಕಾರ ನೀಡಿ ಎಂದರು. ನಿಮ್ಮ ಸಂಘಕ್ಕೆ ಸಹಕಾರ ಬೇಕಿದ್ದರೂ ಕೇಳಬಹುದು ಎಂದರು.

ಸನ್ಮಾನಿತರಾದ ದೇವಾನಂದ ಭಟ್ ರವರು ಮಾತನಾಡಿ ಬೆಳ್ತಂಗಡಿಯವರು ಕಟ್ಟಡದ ಹೊರಭಾಗವನ್ನು ಅಲಂಕರಿಸದೆ ಒಳಭಾಗವನ್ನು ಉತ್ತಮವಾಗಿ ಮಾಡಿದ್ದಾರೆ. ಇದರಿಂದ ಬಾಹ್ಯ ಸೌಂದರ್ಯಕ್ಕೆ ಬೆಲೆ ಕೊಡದೆ ಆಂತರಿಕ ಸೌಂದರ್ಯಕ್ಕೆ ಬೆಲೆ ಕೊಡುವವರು ಎಂದು ತಿಳಿದು ಬರುತ್ತದೆ ಎಂದರು.

ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶಿವಾನಂದ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯದರ್ಶಿ ವಿಕಾಸ್ ರಾವ್, ಸಭಾದ ಪೂರ್ವಾಧ್ಯಕ್ಷರೂ, ಸಭಾದ ಯಾವತ್ತೂ ಬೆನ್ನೆಲುಬಾಗಿ ನಿಂತಿರುವ ಪಿ. ಲಕ್ಷ್ಮೀನಾರಾಯಣ ರಾವ್, ಧರ್ಮಸ್ಥಳ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಸ್ವಾತಿವಿಶ್ವಜಿತ್, ಯುವವೇದಿಕೆ ಅಧ್ಯಕ್ಷರಾದ ಹರೀಶ್ ರಾವ್ ಉಪಸ್ಥಿತರಿದ್ದರು. ಸಭಾದ ಪೂರ್ವಾಧ್ಯಕ್ಷರಾದ ಬಿ.ಕೆ. ಧನಂಜಯ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿಕಟಪೂರ್ವಾಧ್ಯಕ್ಷರಾದ ಪಿ. ರಾಧಾಕೃಷ್ಣ ರಾವ್ ಉದ್ಘಾಟಕರನ್ನು ಪರಿಚಯಿಸಿದರು. ಶ್ರೀಮತಿ ಶುಭ, ಹಾಗೂ ಶ್ರೀಮತಿ ನಿಶಾರವರು ನಿರ್ವಹಿಸಿದ ಕಾರ್ಯಕ್ರಮದಲ್ಲಿ ವಸಂತರಾವ್ ಧನ್ಯವಾದವಿತ್ತರು.

## ಗೃಹ ಪ್ರವೇಶ

ಹರಿನಾರಾಯಣ ರಾವ್ ಮತ್ತು ಶ್ರೀಮತಿ ಕ್ಷಮಾ ಗೌರಿಯವರು ಕುಳಾಯಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ "ಸ್ವಸ್ತಿ" ಇದರ ಗ್ರಹಪ್ರವೇಶವನ್ನು ತಾ.21.01.2024ರಂದು ನೆರವೇರಿಸಿದರು.

## ಶುಭಜನನ

ಶ್ರೀ ರಾಜಾರಾಂ ಪಿಲ್ಲೆಂಕಿ ಮತ್ತು ಶ್ರೀಮತಿ ಮೀನಾಕ್ಷಿ ದಂಪತಿಯ ಪುತ್ರ ಶಶಿತೇಜ ಹಾಗೂ ಬ್ರಹ್ಮಾವರ ಕೆ. ದಿನಮಣಿ ಶಾಸ್ತ್ರಿ ಮತ್ತು ಶ್ರೀಮತಿ ಗಾಯತ್ರಿ ದೇವಿಯವರ ಪುತ್ರಿ ಅಶ್ವಿನಿ ಶಾಸ್ತ್ರಿ ದಂಪತಿಗಳಿಗೆ ತಾ.14.01.2024ರಂದು ಗಂಡು ಮಗುವಿನ ಜನನ.

## ಎರಡು ಹನಿಗಳು

**ನಗು**

ಕಗ್ಗತ್ತಲ
ಕಾರ್ಮೋಡದೆಡೆಯಿಂದ..
ಮಿಂಚೊಂದು
ಹೊಳೆದಂತೆ
ತುಟಿಯಂಚಿನಲ್ಲಿ
ಅರಳುವ ಹೂ....!.

**ಮೌನ**

ಚಿತೆಯ
ಸುತ್ತ
ಕಾಡುವ
ಚಿಂತೆಯ
ಕಾರ್ಮೋಡ.

**–ಎಂ. ಗಣೇಶ್ ರಾವ್, ಬಾರಕೂರು**

## ಶುಭ ವಿವಾಹ

ಉಡುಪಿ ಚಿಟ್ಪಾಡಿ ಕೀ. ಶೇ. ಭುಜಂಗ ರಾವ್ ಮತ್ತು ದಿ| ಸುಂದರಿಯವರ ಮೊಮ್ಮಗ ಹಾಗೂ ಶ್ರೀಮತಿ ಮೀರಾ ಮತ್ತು ರಾಜೇಶ್ ರಾವ್ ದಂಪತಿಯ ಪುತ್ರ **ಚಿ| ನಿಹಾಲ್**ರವರ ವಿವಾಹವು ಶ್ರೀಮತಿ ರಾಧಾ ಮತ್ತು ಸದಾಶಿವನ್ ದಂಪತಿಯ ಪುತ್ರಿ **ಚಿ| ಸೌ| ವಿಜಯಶ್ರೀ**ರವರೊಂದಿಗೆ ತಾ.17.01.2024ರಂದು ಸುಗುಣ ಕಲ್ಯಾಣ ಮಂಟಪ, ಕೆ.ಆರ್. ಪುರಂ, ಕೊಯಮುತ್ತೂರಿನಲ್ಲಿ ಜರಗಿತು.

★★★★ ★★★★

ಕಾರ್ಕಳ ಶ್ರೀಮತಿ ರಾಜೇಶ್ವರಿ ಮತ್ತು ಕೇಶವ ರಾವ್ ದಂಪತಿಯ ಪುತ್ರ **ಚಿ| ಆದರ್ಶ** ರವರ ವಿವಾಹವು ಪೆರ್ಡೂರು ದಿ| ಅನುರಾಧ ಮತ್ತು ರಾಮಮೂರ್ತಿ ರಾವ್ ದಂಪತಿಯ ಪುತ್ರಿ **ಚಿ| ಸೌ| ದೀಪ್ತಿ**ರವರೊಂದಿಗೆ ತಾ.18.01.2024ರಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

★★★★ ★★★★

ಸುಳ್ಯ ದಾಸರಬೈಲ್‌ನಲ್ಲಿರುವ ಶ್ರೀಮತಿ ಜ್ಯೋತಿ ಮತ್ತು ಐ.ಕೆ. ಸತೀಶ್ ರಾವ್ ದಂಪತಿಯ ಪುತ್ರ **ಚಿ| ಭರತ್‌ನ** ವಿವಾಹವು ಪಂಜ ಕೊಯಿಕುಡೆ ಶ್ರೀಮತಿ ಶೋಭಾ ಮತ್ತು ಕೆ.ಬಿ. ಶ್ರೀನಿವಾಸ ರಾವ್ ದಂಪತಿಯ ಪುತ್ರಿ **ಚಿ| ಸೌ| ಅನುಶ್ರೀ**ರವರೊಂದಿಗೆ ತಾ.17.01.2024ರಂದು ಮಂಗಳೂರು ಭಗವತಿ ಕ್ಷೇತ್ರ ಕೂಟಕ್ಕಳ ಆಡಿಟೋರಿಯಂ ನಲ್ಲಿ ನಡೆಯಿತು.

★★★★ ★★★★

ಶ್ರೀಮತಿ ಭಾರತಿ ಮತ್ತು ಹೆಮ್ಮಾಡಿ ಶಿವಶಂಕರ್ ಹೆಬ್ಬಾರ್ ದಂಪತಿಯ ಪುತ್ರಿ **ಚಿ| ಸೌ| ಅಕ್ಷತಾ ಎಚ್**. ಶ್ರೀಮತಿ ನಾಗರತ್ನ ಮತ್ತು ಹುಲ್ಕೋಡು ನಾಗರಾಜ್ ದಂಪತಿಯ ಪುತ್ರ **ಚಿ| ನರಸಿಂಹಮೂರ್ತಿ ಹೆಚ್. ಎನ್** ರವರೊಂದಿಗೆ ತಾ.21.01.2024ರಂದು ಶಿವಮೊಗ್ಗ ವೀರಶೈವ ಸಭಾಭವನದಲ್ಲಿ ಜರಗಿತು.

★★★★ ★★★★

ಉಡುಪಿ ಚಿಟ್ಪಾಡಿ ಕೀ. ಶೇ. ಭುಜಂಗ ರಾವ್ ಮತ್ತು ದಿ| ಸುಂದರಿಯವರ ಮೊಮ್ಮಗ ಹಾಗೂ ಶ್ರೀಮತಿ ಸುಜಾತಾ ಮತ್ತು ಶ್ರೀ ಅರುಣ್ ಬಿ. ರಾವ್ ದಂಪತಿಯ ಪುತ್ರ **ಚಿ| ಪವನ್** ಅವರ ವಿವಾಹವು ಕೀ. ಶೇ. ಪೆರ್ಡೂರು ಗೋಪಾಲ ಕೃಷ್ಣ ಭಂಡಿ ಮತ್ತು ಲೀಲಾವತಿ ದಂಪತಿಯ ಪೌತ್ರಿ ಹಾಗೂ ಶ್ರೀಮತಿ ವಾಣಿ ಮತ್ತು ಪೆರ್ಡೂರು ರವೀಂದ್ರ ಭಂಡಿ ದಂಪತಿಯ ಪುತ್ರಿ **ಚಿ| ಸೌ| ಪ್ರಗತಿ** ರವರೊಂದಿಗೆ ತಾ.20.12.2023ರಂದು ಶ್ರೀ ಶಾರದಾ ಕಲ್ಯಾಣ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

★★★★ ★★★★

ಕೀ. ಶೇ. ಪಾದೆಬೆಟ್ಟು ಕುಪ್ಪುಸ್ವಾಮಿ ಮತ್ತು ಶಕುಂತಲಾ ದಂಪತಿಯ ಪೌತ್ರ ಹಾಗೂ ಶ್ರೀಮತಿ ವೇದವಲ್ಲಿ ಮತ್ತು ಸುದರ್ಶನ್ ರಾವ್ ಪಾದೆಬೆಟ್ಟು ದಂಪತಿಯ ಪುತ್ರ **ಚಿ| ರೋಹಿತ್** ರವರ ವಿವಾಹವು ಶ್ರೀಮತಿ ವೈದೇಹಿ ಮತ್ತು ಕೀ. ಶೇ. ಶ್ರೀನಿವಾಸಯ್ಯ ರವರ ಪೌತ್ರಿ, ಡಾ| ಜಯಂತಿ ಮತ್ತು ಎಸ್. ಭಾಸ್ಕರ್ ಶ್ರೀನಿವಾಸಯ್ಯ ದಂಪತಿಯ ಪುತ್ರಿ **ಚಿ| ಸೌ| ಅರುಣಾ**ರವರೊಂದಿಗೆ ಬೆಂಗಳೂರಿನ ಜೆ.ಪಿ. ನಗರ ಎಂ.ಎಲ್.ಆರ್. ಕಾನ್ವೆನ್ಷನ್ ಸೆಂಟರ್‌ನಲ್ಲಿ ದಿನಾಂಕ 01–2–2024ರಂದು ಜರಗಿತು.

★★★★ ★★★★

ಶ್ರೀಮತಿ ಜಯಂತಿ ಮತ್ತು ಶ್ರೀ ಕೃಷ್ಣರಾಜ ರಾವ್ ಮುನಿಯಾಲು ಇವರ ಪುತ್ರ **ಚಿ| ಪುನೀತ್**ರವರ ವಿವಾಹವು ಶ್ರೀಮತಿ ನೀಲಂ ಮತ್ತು ಶ್ರೀ ಜತೀಂದರ್ ಕುಮಾರ್ ಕೌಶಾಲ್‌ರವರ ಪುತ್ರಿ **ಚಿ| ಸೌ| ಕಲ್ಪನಾ**ರೊಂದಿಗೆ ಸಿಲ್ವರ್ ಓಕ್ ಪ್ಯಾಲೇಸ್ & ರೆಸಾರ್ಟ್ಸ್ ಸಂತೋಖ ಘರ್, ಹಿಮಾಚಲ ಪ್ರದೇಶದಲ್ಲಿ ತಾ.4–2–2024ರಂದು ಜರಗಿತು.

## ಉಪನಯನ

ಶ್ರೀಮತಿ ಎ. ಶೋಭಾ ರಾವ್ ಮತ್ತು ಕೀ. ಶೇ. ಆಲುಗ್ಗೇಲು ಗಂಗಾಧರ ರಾಯರ ಮೊಮ್ಮಗ ಹಾಗೂ ಶ್ರೀಮತಿ ಸೌಮ್ಯ ಮತ್ತು ಅವಿನಾಶ್‌ಚಂದ್ರ ರಾವ್ ದಂಪತಿಯ ಪುತ್ರ ಚಿ| ಅನಿರುದ್ಧ್‌ನ ಬ್ರಹ್ಮೋಪದೇಶವು ತಾ.17.01.2024ರಂದು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ಜರಗಿತು.

★★★★ ★★★★


ಐ.ಕೆ. ಅನಂತ್ ಮತ್ತು ಶ್ರೀಮತಿ ಅಕ್ಷತಾರವರ ಪುತ್ರ (ಶ್ರೀಮತಿ ಕಾಂತಿ ಮತ್ತು ದಿ| ಐ.ಕೆ. ವಿಜಯಕುಮಾರ್ ರಾವ್ ಹಾಗೂ ಶ್ರೀಮತಿ ಸುಮಂಗಲಾ ಮತ್ತು ಶ್ರೀ ಬಿ.ಎನ್. ಶ್ರೀಕೃಷ್ಣ ರಾವ್ ಅವರ ಮೊಮ್ಮಗ) ಚಿ| ಅದ್ವೈತ್ ರವರ ಉಪನಯನವು ತಾ.28.01.2024ರಂದು ಮೈಸೂರಿನ ಶ್ರೀ ಜ್ಞಾನಶಕ್ತಿ ಪ್ರಾರ್ಥನಾಶಕ್ತಿಯಲ್ಲಿ ನಡೆಯಿತು.

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ನಿಧನ



ಡಾ| ಇನ್ನ ಕೇದಗೆ ನೀಲಕಂಠನ್ ಅವರು 87ನೇ ವಯಸ್ಸಿನಲ್ಲಿ ತಾ.12.01.2024ರಂದು ಕುಂಭಕೋಣಂನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಚೆಂಡುಕಲಾ ವಿಷ್ಣು ರಾವ್ ಅವರು 82ನೇ ವಯಸ್ಸಿನಲ್ಲಿ ತಾ.13.01.2024ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ದಿ| ವೆಂಕಟ್ರಮಣ ಎಂ. ಲೋಕೇಶ್ವರರ ಪತ್ನಿ ಶ್ರೀಮತಿ ದೇವಯಾನಿ ವಿ. ಲೋಕೇಶ್ವರ್ ಅವರು 82ನೇ ವಯಸ್ಸಿನಲ್ಲಿ ತಾ.15.01.2024ರಂದು ಕುಮುಟಾದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ದಿ| ಕೃಷ್ಣಮೂರ್ತಿ ಭಟ್ ಕುಂದಾಪುರ ಅವರ ಪತ್ನಿ ಶ್ರೀಮತಿ ಕಮಲಮ್ಮ ಅವರು 85ನೇ ವಯಸ್ಸಿನಲ್ಲಿ ತಾ.18.01.2024ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ಇಂದಿರಾ ಬೆಳ್ಳೆ W/o ದಿ| ಬೆಳ್ಳೆ ಸದಾಶಿವ ರಾವ್ ಅವರು 89ನೇ ವಯಸ್ಸಿನಲ್ಲಿ ತಾ.23.01.2024ರಂದು ನಿಧನರಾದರು. ಅವರು ಇಬ್ಬರು ಪುತ್ರರು ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ಅನಸೂಯಮ್ಮ W/o ಬಿ.ಎನ್. ರಾಮಚಂದ್ರರಾವ್ ಬೀಜಾಡಿ, ಕೋಟೇಶ್ವರ ಅವರು 75ನೇ ವಯಸ್ಸಿನಲ್ಲಿ ತಾ.24.01.2024ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬಳು ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ಪ್ರಭಾವತಿ ಎಸ್. ಜೋಯಿಷಿ (ದಿ| ಸತ್ಯನಾರಾಯಣ್ ಎಂ. ಜೋಯಿಷಿಯವರ ಪತ್ನಿ ಮತ್ತು ಇಸಿ ಸದಸ್ಯರಾದ ಶ್ರೀ ಮುರಳೀಧರ ಎಂ. ಜೋಯಿಷಿಯುವರ ತಾಯಿ) ಅವರು 75ನೇ ವಯಸ್ಸಿನಲ್ಲಿ ತಾ.24.01.2024ರಂದು ಸಿದ್ದಾಪುರದಲ್ಲಿ ನಿಧನರಾದರು. ಅವರು ಒಬ್ಬಳು ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ಹೊಸಬೆಟ್ಟು, ಸುರತ್ಕಲ್ ನಿವಾಸಿಯಾದ ದಿ| ಮೋಹನ್ ರಾವ್ ಅವರ ಪುತ್ರ ಕಾಪು ಪ್ರಕಾಶ್ ರಾವ್ ಅವರು 67ನೇ ವಯಸ್ಸಿನಲ್ಲಿ ತಾ.27.01.2024ರಂದು ನಿಧನರಾದರು. ಅವರು ಪತ್ನಿ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಕುಂದಾಪುರ ಹೆಮ್ಮಾಡಿಯ ರತ್ನಾಕರ ಹೆಬ್ಬಾರ್ ಅವರು 80ನೇ ವಯಸ್ಸಿನಲ್ಲಿ ತಾ.20.01.2024ರಂದು ನಿಧನರಾದರು. ಅವರು ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಕೋಶಾಧಿಕಾರಿಯಾಗಿದ್ದ ದಿ| ಕರಂಬಳ್ಳಿ ವೆಂಕಟ್ ರಾವ್ ಅವರ ಪತ್ನಿ ಶ್ರೀಮತಿ ಲೀಲಾ ವಿ. ರಾವ್ ಅವರು 82ನೇ ವಯಸ್ಸಿನಲ್ಲಿ ತಾ.04.02.2024ರಂದು ಉಡುಪಿಯಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ದಿ| ವಾಸುದೇವ ರಾವ್ ಅವರ ಧರ್ಮಪತ್ನಿ ಶ್ರೀಮತಿ ಇಂದಿರಾ ಅಮ್ಮ ಅವರು ತಾ.04.02.2024ರಂದು ಉಡುಪಿ ಮೂಡುಬೆಳ್ಳೆ ಬಳಿಯ ಪಡುಕಲ್ಮಂಜೆಯಲ್ಲಿ ನಿಧನರಾದರು. ಅವರು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಬೀಜಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯೆ, ಸಮಾಜಸೇವಕಿ ಲಕ್ಷ್ಮೀ ಅಮ್ಮ ಅವರು 81ನೇ ವಯಸ್ಸಿನಲ್ಲಿ ತಾ.27.01.2024ರಂದು ಬೀಜಾಡಿ ದೊಡ್ಮನೆಬೆಟ್ಟು ನಿವಾಸದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮುಖ್ಯಪ್ರಾಣ ಭಜನಾ ಮಂದಿರದ ಹಿರಿಯ ಸಕ್ರಿಯ ಸದಸ್ಯೆಯಾಗಿದ್ದ ಅವರು ಕೋಟಿಲಿಂಗೇಶ್ವರ ದೇಗುಲದಲ್ಲಿ 16 ವರ್ಷ ಧಾರ್ಮಿಕ ಸೇವೆ ಸಲ್ಲಿಸಿದ್ದರು. ಪರಿಸರದಲ್ಲಿ ಲಕ್ಷ್ಮೀ ಅಮ್ಮ ಎಂದೇ ಪರಿಚಿತರಾಗಿದ್ದರು.

★★★★ ★★★★



ಬಜಾಜ್ ಆಟೋ ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದ ದಿ| ಪುರುಷೋತ್ತಮ ಸಾಂತುರ್‌ಕರ್ ಅವರ ಧರ್ಮಪತ್ನಿ ಶ್ರೀಮತಿ ಪದ್ಮಲತಾ ಸಾಂತುರ್‌ಕರ್ ಅವರು 87ನೇ ವಯಸ್ಸಿನಲ್ಲಿ ತಾ.05.02.2024 ರಂದು ಮುಂಬೈನಲ್ಲಿ ನಿಧನರಾದರು. ಅವರು ಮೂವರು ಪುತ್ರರನ್ನು ಅಗಲಿದ್ದಾರೆ. ಅವರು ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿವಿಧ ಧನಸಹಾಯ ಮತ್ತು ಸೇವೆಗಳಿಗೆ ಹಾಗೂ ಅದ್ದೂರಿ ಆಭರಣಗಳನ್ನು ಕೊಡುಗೆ ನೀಡಿದ್ದಾರೆ. ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಎ.ಬಿ.ಎಸ್.ಬಿ.ಎಸ್. ಸಭಾಭವನಕ್ಕೆ ಮತ್ತು ಶಿಕ್ಷಣ ನಿಧಿಗೆ ಧನಸಹಾಯ ನೀಡಿರುತ್ತಾರೆ.

★★★★ ★★★★

ಉಚ್ಚಿಲ ವಸಂತ್ ರಾವ್ ದಿ| ಉಚ್ಚಿಲ ಮೋಹನ್ ರಾವ್ ಅವರ ಪುತ್ರ (ನಿವೃತ್ತ ಜನರಲ್ ಮೆನೇಜರ್ ಬಜಾಜ್ ಆಟೋ) ಅವರು 83ನೇ ವಯಸ್ಸಿನಲ್ಲಿ ತಾ.26.01.2024ರಂದು ಪುಣೆಯಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.28-02-2024 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.05-03-2024** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ **(ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-02-2024 ಹಾಗೂ 14.03.2024** ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ **9-00**ರಿಂದ ಮಧ್ಯಾಹ್ನ **12-00** ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಕುಂಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 13.02.2024 | ಕುಂಭ ಸಂಕ್ರಮಣ | 06.03.2024 | ಸ್ಮಾರ್ತೈಕಾದಶೀ |
| 16.02.2024 | ರಥಸಪ್ತಮಿ | 07.03.2024 | ಭಾಗವತ-ವೈಷ್ಣವೈಕಾದಶೀ |
| 20.02.2024 | ಸರ್ವೈಕಾದಶೀ | 08.03.2024 | ಮಹಾಶಿವರಾತ್ರಿ |
| 24.02.2024 | ಹುಣ್ಣಿಮೆ | 10.03.2024 | ಅಮಾವಾಸ್ಯೆ |
| 25.02.2024 | ಶಿಶಿರ ಋತು ಮಾಘ ಮಾಸದ ಕೃಷ್ಣ ಪಕ್ಷಾರಂಭ | 11.03.2024 | ಶಿಶಿರ ಋತು ಫಾಲ್ಗುಣ ಮಾಸದ ಶುಕ್ಲ ಪಕ್ಷಾರಂಭ |
| 28.02.2024 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.38ಕ್ಕೆ | 14.03.2024 | ಮೀನ ಸಂಕ್ರಮಣ |
| | | 20.03.2024 | ಸರ್ವೈಕಾದಶೀ |

## ಆದರ್ಶ ರಾವ್ ಪರೀಕ ಇವರಿಗೆ ಶ್ರದ್ಧಾಂಜಲಿ



ಡಾ| ಪಿ.ಜಿ. ರಾವ್ ಮುಂಬೈ ಅವರ ಎರಡನೇ ಪುತ್ರ ಪರೀಕ ಆದರ್ಶ್ ಅವರು 48ನೇ ವಯಸ್ಸಿನಲ್ಲಿ ತಾ.17.01.2024ರಂದು ಮುಂಬೈನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರು ಯುವವಿಭಾಗ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದಲ್ಲಿ ಸಕ್ರಿಯ ಸದಸ್ಯರಾಗಿದ್ದರು.

ಶ್ರೀ ಶಾರದಾ ಮಂಟಪದಲ್ಲಿ ತಾ.29.01.2024ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಹಾಮಂಡಲದ ಅಧ್ಯಕ್ಷರೂ, ಶ್ರೀ ಶಾರದಾ ಮಂಟಪದ ಅಧ್ಯಕ್ಷರೂ ಆದ ಕೆ. ಮಂಜುನಾಥ್ ಹೆಬ್ಬಾರ್ ಆದರ್ಶ್‌ರವರ ಗುಣಗಾನ ಮಾಡಿ ಸಂತಾಪ ವ್ಯಕ್ತಪಡಿಸಿದರು. ಚಿಂತಕ ನಟರಾಜ್ ಪರ್ಕಳ ಅವರು ಸಣ್ಣ ವಯಸ್ಸಿನಲ್ಲಿ ನಿಧನರಾದ ಶ್ರೀಯುತರ ಬಗ್ಗೆ ಮಾತನಾಡಿ ಆಧ್ಯಾತ್ಮಿಕ ನುಡಿಗಳನ್ನಾಡಿದರು. ಬಂಧುಗಳಾದ ರಾಜೇಶ್ ರಾವ್‌ರವರು ಅವರೊಂದಿಗಿನ ಬಾಂಧವ್ಯವನ್ನು ತಿಳಿಸಿ ದುಃಖ ವ್ಯಕ್ತಪಡಿಸಿದರು. ಪ್ರಾರಂಭದಲ್ಲಿ ಅರವಿಂದ ಕುಮಾರ್ ಅವರು ಆದರ್ಶ ರಾವ್ ಉಡುಪಿಯ ಸಂಘದ ಯುವ ವೇದಿಕೆ ಹಾಗೂ ಕ್ರಿಕೆಟ್ ಪಂದ್ಯಾಟಗಳಲ್ಲಿ ಅವರ ಬದ್ಧತೆ ಬಗ್ಗೆ ಮಾತನಾಡಿ ಶ್ರದ್ಧಾಂಜಲಿ ನುಡಿಗಳನ್ನಾಡಿ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಒಂದು ನಿಮಿಷದ ಮೌನ ಪ್ರಾರ್ಥನೆ ಹಾಗೂ ಪುಷ್ಪ ನಮನಗಳೊಂದಿಗೆ ಸಭೆ ಮುಕ್ತಾಯವಾಯಿತು.




Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



# ಶ್ರೇಷ್ಠ ಕೃಷಿಕ ಪ್ರಶಸ್ತಿ ಪಡೆದ ಪೆರ್ಡೂರಿನ ಅಶ್ವತ್ ಹೆಬ್ಬಾರ್‌ರವರಿಗೆ



ಜಿಲ್ಲಾ ಮಟ್ಟದ ಗಣರಾಜ್ಯೋತ್ಸವ ಪ್ರಶಸ್ತಿ ಪಡೆದ ಪೆರ್ಡೂರಿನ ಅಶ್ವತ್ ಹೆಬ್ಬಾರ್‌ರವರಿಗೆ ಸಾವಯವ ಕೃಷಿ ಮತ್ತು ಕೃಷಿ ಉತ್ಪನ್ನಗಳ ತಯಾರಿಕೆಗಾಗಿ ಶ್ರೇಷ್ಠ ಕೃಷಿಕ ಪ್ರಶಸ್ತಿ ನೀಡಲಾಗಿದೆ. ಉಡುಪಿಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಂದು ಈ ಪ್ರಶಸ್ತಿಯನ್ನು ಉಡುಪಿಯ ಜಿಲ್ಲಾ ಉಸ್ತುವಾರಿ ಮಂತ್ರಿ ಲಕ್ಷ್ಮೀ ಹೆಬ್ಬಾಳ್ಕರ್ ಜಿಲ್ಲೆಯ ಶಾಸಕರು ಮತ್ತು ಡಿ.ಸಿ. ಯವರ ಉಪಸ್ಥಿತಿಯಲ್ಲಿ ನೀಡಲಾಯಿತು. ಇವರು ಪೆರ್ಡೂರಿನ ದಿ| ಜಯರಾಮ ಹೆಬ್ಬಾರ್ ಮತ್ತು ಸುಕನ್ಯಾ ಹೆಬ್ಬಾರ್ ದಂಪತಿಯ ಪುತ್ರ.

## ಸಿ.ಎ. ಪರೀಕ್ಷೆಯಲ್ಲಿ ತೇರ್ಗಡೆ



### ಕು. ಶ್ರೇಯಾ

ಶ್ರೀಮತಿ ಸುಕನ್ಯಾ ಮತ್ತು ರಾಜೇಂದ್ರ ರಾವ್ ಬಿಜೈ ಮಂಗಳೂರು ದಂಪತಿಯ ಪುತ್ರಿ ಕು. ಶ್ರೇಯಾ ಮೊದಲ ಪ್ರಯತ್ನದಲ್ಲಿಯೇ ಇಂಟರ್ ಮೀಡಿಯೇಟ್ CA ತೇರ್ಗಡೆಯಾಗಿದ್ದಾರೆ.

**** ****



### ಶ್ರೀಮತಿ ಸಂಧ್ಯಾ ಜಿ.

ಶ್ರೀಮತಿ ಸುನೀತಾ ಹೆಬ್ಬಾರ್ ಮತ್ತು ಕಬ್ಬಿನಾಲೆ ಗಣೇಶ್ ಹೆಬ್ಬಾರ್ ದಂಪತಿಯ ಪುತ್ರಿ ಹಾಗೂ ಕಾರ್ಕಳದ ಹೆಸರಾಂತ ಲೆಕ್ಕಪರಿಶೋಧಕ ಸಿ.ಎ. ರವಿಪ್ರಸಾದ್ ಎಸ್ ಅವರ ಧರ್ಮಪತ್ನಿ ಶ್ರೀಮತಿ ಸಂಧ್ಯಾ ಜಿ. ಅವರು ಸಿ.ಎ. ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

**** ****



### ರೋಹನ್

ರೋಹನ್ ಎಸ್ S/o ಶಿವಪ್ರಸಾದ್ (ಶಿವಾನಂದ), ಶ್ರೀಮತಿ ವಾಗ್ದೇವಿ ಎಸ್. ರಾವ್ ಅವರ ಮೊಮ್ಮಗ ಅವರು ಮೊದಲ ಪ್ರಯತ್ನದಲ್ಲಿ ಅಖಿಲ ಭಾರತ CA ನಲ್ಲಿ 14ನೇ ರ್‍ಯಾಂಕ್ ಗಳಿಸಿದ್ದಾರೆ.

# ಕುಣಿತ ಭಜನೆ ಮಹಿಳಾ ತಂಡ ಉದ್ಘಾಟನೆ



ಕಬ್ಬಿನಾಲೆ ಹೆಬ್ಬಾರ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ಘಟಕದ ಆಶ್ರಯದಲ್ಲಿ ಕುಣಿತ ಭಜನೆ ಮಹಿಳಾ ತಂಡದ ಉದ್ಘಾಟನೆ ಜ.26 ರಂದು ಕಬ್ಬಿನಾಲೆ ಮೇಲ್ಮಠ ಲಕ್ಷ್ಮೀನಾರಾಯಣ ದೇವಸ್ಥಾನ ಸಭಾಭವನದಲ್ಲಿ ನಡೆಯಿತು. ಮಹಿಳಾ ಘಟಕದ ಅಧ್ಯಕ್ಷೆ ಸುಮಂಗಲಾ ಜಗದೀಶ ಹೆಬ್ಬಾರ್ ಕಾರ್ಯಕ್ರಮ ಉದ್ಘಾಟಿಸಿದರು. ಹೆಬ್ಬಾರ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಸೀತಾರಾಮ ಹೆಬ್ಬಾರ್ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ಧರ್ಮದರ್ಶಿ ಪರಮೇಶ್ವರ ಹೆಬ್ಬಾರ್, ಕಾರ್ಯದರ್ಶಿ ಬಾಲಚಂದ್ರ ಹೆಬ್ಬಾರ್, ಬಾಲಕೃಷ್ಣ ಹೆಬ್ಬಾರ್ ಪೇರಳ, ಜಯಂತ ಕುಮಾರ್, ತಂಡದ ತರಬೇತುದಾರರಾದ ಉಷಾ ಎಂ ಹೆಬ್ಬಾರ್, ಭಾರತಿ ಸುಬ್ರಮಣ್ಯ ಹೆಬ್ಬಾರ್, ಇಂದಿರಾ ಶಶಿಧರ ಹೆಬ್ಬಾರ್, ಸರಸ್ವತಿ ಜ್ಞಾನೇಶ್ ಹೆಬ್ಬಾರ್, ಶಶಿದೇವಿ ಗಂಗಾಧರ ಹೆಬ್ಬಾರ್, ಸ್ಮಿತಾ ವಸಂತ ರಾವ್ ಮೊದಲಾದವರು ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ಬಳಿಕ ಕುಣಿತ ಭಜನೆ ತರಬೇತಿ ನಡೆಯಿತು. ಸುನೀತಾ ಜಿ. ಹೆಬ್ಬಾರ್ ನಿರೂಪಿಸಿ, ಸ್ವಾತಿ ಹೆಬ್ಬಾರ್ ಸ್ವಾಗತಿಸಿದರು. ಕವಿತಾ ಹೆಬ್ಬಾರ್ ವಂದಿಸಿದರು. ವಸಂತ ರಾವ್ ಸಹಕರಿಸಿದರು.



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನಾ ದಿನವಾದ 22.01.2024ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಜರಗಿದ ಸಮಾರಂಭದಲ್ಲಿ ಕರಸೇವಕರಾದ ಜಯಂತ್ ಹೆಬ್ಬಾರ್ ಕಬ್ಬಿನಾಲೆ, ಮೋಹನ್ ರಾವ್ ಚಿಟ್ಪಾಡಿ, ಮಂಜುನಾಥ್ ಹೆಬ್ಬಾರ್ ಕಬ್ಬಿನಾಲೆ ಹಾಗೂ ರಾಧಾಕೃಷ್ಣ ಹೆಬ್ಬಾರ್ ಕಬ್ಬಿನಾಲೆ ಇವರನ್ನು ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ವತಿಯಿಂದ ಗೌರವಿಸಲಾಯಿತು.

# ಸ್ಥಾನಿಕ ಮಹಾಮಂಡಲ ಮಂಗಳೂರು



13.01.2024ನೇ ಶನಿವಾರ ನಡೆದ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.) ಮೂಡುಬಿದರೆಯ ಆಡಳಿತ ಮಂಡಳಿ ಸಭೆಯಲ್ಲಿ ಮಹಾಮಂಡಲದ ಪದಾಧಿಕಾರಿಗಳು ಭಾಗವಹಿಸಿದ್ದರು. ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್ ಮುಂದಿನ ಮೂರು ವರ್ಷದ ಮಹಾಮಂಡಲದ ಗುರಿಯನ್ನು ಸಭೆಯಲ್ಲಿ ತಿಳಿಸಿದರು. ಸ್ಥಾಪಕ ಅಧ್ಯಕ್ಷರಾದ ಸಿ.ಎಸ್. ರಾವ್, ನಿಕಟ ಪೂರ್ವ ಅಧ್ಯಕ್ಷರಾದ ದೇವಾನಂದ್ ಭಟ್, ಕಾರ್ಯದರ್ಶಿ ಮುರಳೀಧರ ಶರ್ಮ, ಕೋಶಾಧಿಕಾರಿ ಉದಯ ರಾವ್, ಜೊತೆ ಕಾರ್ಯದರ್ಶಿ ಕೇಶವ ರಾವ್ ಮತ್ತು ಅಶೋಕ್ ರಾವ್, ಉಪಾಧ್ಯಕ್ಷರಾದ ಕಾಂತಾವರ ಪ್ರಭಾಕರ್ ರಾವ್ ಮತ್ತು ಬೊಕ್ಕಸ ಚಂದ್ರಶೇಖರ್ ರಾವ್ ಉಪಸ್ಥಿತರಿದ್ದರು.

ಮೂಡುಬಿದರೆಯ ಸಂಘದಿಂದ ಮಹಾಮಂಡಲದ ಎಲ್ಲಾ ಪದಾಧಿಕಾರಿಗಳನ್ನು ಸಂಘದ ಅಧ್ಯಕ್ಷರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು. ಮೂಡುಬಿದರೆಯ ನಿಯೋಜಿತ ಸಂಘದ ಸ್ಥಳವನ್ನು ಮಹಾಮಂಡಲದ ಪದಾಧಿಕಾರಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯದರ್ಶಿ ಸುರೇಶ್ ರಾವ್ ಎಲ್ಲರನ್ನೂ ಸ್ವಾಗತಿಸಿ, ಕೊನೆಯಲ್ಲಿ ಬೊಕ್ಕಸ ಚಂದ್ರಶೇಖರ್ ರಾವ್ ಧನ್ಯವಾದವಿತ್ತರು.



ಕಬ್ಬಿನಾಲೆಯಲ್ಲಿ ಜರಗಿದ ವಾರ್ಷಿಕೋತ್ಸವದಲ್ಲಿ ಮಹಾಮಂಡಲದ ಅಧ್ಯಕ್ಷರಾದ ಕೆ. ಮಂಜುನಾಥ ಹೆಬ್ಬಾರ್‌ರವರಿಗೆ ಅವರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು.



ಪುತ್ತಿಗೆ ಮಠದ ವಿಶ್ವ ಗೀತಾ ಪರ್ಯಾಯದ ಅವಧಿಯಲ್ಲಿ ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯವರಿಂದ ದಿನಾಂಕ 29.01.2024ರಂದು ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಭಜನಾ ಕಾರ್ಯಕ್ರಮ ನಡೆಯಿತು.



ದಿನಾಂಕ 21.01.2024ರಂದು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಮತ್ತು ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಂಘ ಬಾರ್ಕೂರು ಇದರ ಜಂಟಿ ಆಶ್ರಯದಲ್ಲಿ ಪಂಚಲಿಂಗೇಶ್ವರ ದೇವಸ್ಥಾನದ ಸ್ವಚ್ಛತಾ ಅಭಿಯಾನ ಜರಗಿತು.




ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಮಹಿಳಾ ಸದಸ್ಯರು ದಿನಾಂಕ 06-01-2024 ಮತ್ತು 07-01-2024 ರಂದು ಶೃಂಗೇರಿಯಲ್ಲಿ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀ ಶ್ರೀ ಜಗದ್ಗುರುಗಳು ಭಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಎಲ್ಲರಿಗೂ ಆಶೀರ್ವಾದಪೂರ್ವಕ ಮಂತ್ರಾಕ್ಷತೆಯನ್ನು ನೀಡಿದರು.

## ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್ ವತಿಯಿಂದ ಕ್ರಿಕೆಟ್ ಪಂದ್ಯಾಟ



ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್ ಯುವ ವೇದಿಕೆಯ ವತಿಯಿಂದ ಸ್ಥಾನಿಕ ಸಮಾಜದ ಯುವಕರಿಗೆ 10ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟವು ಪಣಂಬೂರು NMPT ಮೈದಾನದಲ್ಲಿ ದಿ.28.01.2024 ಆದಿತ್ಯವಾರದಂದು ನಡೆಸಲಾಯಿತು. ಈ ಪಂದ್ಯಾಟದಲ್ಲಿ ಸ್ಥಾನಿಕ ಸಮಾಜದ 18 ತಂಡಗಳು ಭಾಗವಹಿಸಿದ್ದವು. ಪ್ರಥಮ ಬಹುಮಾನವನ್ನು ಕಟಪಾಡಿ ತಂಡ, ದ್ವಿತೀಯ ಬಹುಮಾನವನ್ನು ಪಡುಬಿದ್ರಿ ತಂಡವು ಪಡೆಯಿತು. ಹಾಗೂ ತ್ರೋಬಾಲ್ ಪಂದ್ಯಾಟದಲ್ಲಿ ಕಾರ್ಕಳ ತಂಡ ಪ್ರಥಮ, ಸುರತ್ಕಲ್ ಬಿ ತಂಡ ದ್ವಿತಿಯ ಬಹುಮಾನವನ್ನು ಪಡೆಯಿತು.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.) ಬಂಟ್ವಾಳ ಶೃಂಗೇರಿ ಶ್ರೀಗಳಿಂದ ಶಿಲಾನ್ಯಾಸಗೊಳ್ಳಲಿರುವ ಶಿಲೆಗಳಿಗೆ ಪೂಜೆ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ (ರಿ.) ಬಂಟ್ವಾಳ ಇದರ ವತಿಯಿಂದ ನಿರ್ಮಾಣಗೊಳ್ಳಲಿರುವ ಆದಿಗುರು ಶ್ರೀ ಶಂಕರಾಚಾರ್ಯರ ಗುರುಮಂದಿರದ ಭೂಮಿ ಪೂಜನ ಮತ್ತು ಶಿಲಾನ್ಯಾಸ ಕಾರ್ಯಕ್ರಮವು ದಿ.21.02.2024ನೇ ಬುಧವಾರ ನಡೆಯಲಿದ್ದು ಇದರ ನಿಮಿತ್ತ ತಾ. 29.01.2024ರಂದು ಶೃಂಗೇರಿಗೆ ದ.ಕ. ಜಿಲ್ಲಾ ಪ್ರಾಂತ್ಯದ ಶೃಂಗೇರಿ ಪೀಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವರವರ ನೇತೃತ್ವದಲ್ಲಿ ತೆರಳಿದ್ದು, ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಗಳವರು, ಶಿಲಾನ್ಯಾಸಗೊಳ್ಳಲಿರುವ ಶಿಲೆಗಳಿಗೆ ಪೂಜೆಯನ್ನು ಸಲ್ಲಿಸಿ ಆಶೀರ್ವದಿಸಿರುತ್ತಾರೆ. ಹಾಗೂ ಶೀಘ್ರದಲ್ಲಿ ಗುರುಮಂದಿರವು ಪೂರ್ಣಗೊಂಡು ಲೋಕಾರ್ಪಣೆಗೊಳ್ಳುವಂತೆ ಹಾಗೂ ಸಕಲ ಭಕ್ತವೃಂದಕ್ಕೂ ಸನ್ಮಂಗಳವಾಗಲಿ ಎಂದು ಶುಭ ಹಾರೈಕೆಗಳನ್ನು ನೀಡಿರುತ್ತಾರೆ.

## ಶ್ರೀ ಸುಬ್ಬಣ್ಣನವರಿಗೆ 'ಗೋಕುಲ ರತ್ನ ಪ್ರಶಸ್ತಿ'



B.S.K.B. ಅಸೋಸಿಯೇಷನ್, ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್ ಮತ್ತು ಸಂಜೀವನಿ ಟ್ರಸ್ಟ್ ವತಿಯಿಂದ 26.01.2024 ರಂದು 75 ನೇ ಗಣರಾಜ್ಯೋತ್ಸವದಂದು ಸರಸ್ವತಿ ಆಡಿಟೋರಿಯಂ, ಗೋಕುಲ ಸಯಾನ್‌ನಲ್ಲಿ 5 ದಶಕಗಳಿಗೂ ಹೆಚ್ಚು ಕಾಲ ಸಲ್ಲಿಸಿರುವ ಸಮುದಾಯ ಮತ್ತು ಸಾಮಾಜಿಕ ಸೇವೆಗಳನ್ನು ಗುರುತಿಸಿ ಕರಂಬಳ್ಳಿ ಸುಬ್ಬಣ್ಣನವರಿಗೆ **'ಗೋಕುಲ ರತ್ನ ಪ್ರಶಸ್ತಿ'** ನೀಡಲಾಯಿತು. ಇವರು ಸುಬ್ರಹ್ಮಣ್ಯ ಸಂಘ ಮುಂಬೈಯಲ್ಲಿ ಪದಾಧಿಕಾರಿಗಳಾಗಿದ್ದು, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಉಡುಪಿ ಕರಂಬಳ್ಳಿಯವರಾದ ಶ್ರೀಯುತರು ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಹಾಗೂ ವಿವಿಧ ಸಂಘಗಳಲ್ಲಿ ಸದಸ್ಯರಾಗಿದ್ದಾರೆ. ಇವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.




Welcome to Kanasu The Resort

Escape to Kanasu for an unforgettable nature retreat.
Enjoy rustic pine cottages, warm hospitality, and local culinary delights.
Reconnect with family amidst nature's beauty.

Key Features & Amenities

- 6 Cottages
- 1 Farm House
- AC Rooms
- Swimming Pool
- Free Wifi
- Free Parking
- Free Breakfast
- Goushala
- Dhaba Style Restaurant
- All Kinds of Events

List of Games and Activities:

- Carom, Chess
- Jenga, Dart
- Fussball
- Mini Golf
- Basketball
- Trampoline
- Cricket
- Mini Football
- Badminton

For More Information


+91 90191 26470 www.kanasuresort.com Kukkehalli, Udupi - 576124



SUMIRASA-Full Villa in Udupi for Stay



Relax with the whole family at this peaceful place to stay with all major attraction at a short distance. Enjoy the sea waves at Malpe beach within 5 km drive. Seak blessing at the famous Srikrishna Temple and Anantheshwara Temple which is just 2 k.m.Perfect place for hosting wedding guests with major wedding venues and convention halls near by.



For Booking Contact : +91 98220 28537
You can also visit
https://www.airbnb.co.in/rooms



With Best Compliments From :

BUILDING DREAMS, ENHANCING LIVES.



NAKSHATRA — GANDHINAGAR — | SOLITAIRE — HATHILL, — | HABITAT ONE 54 — DEREBAIL — | ANANTESSH — CAR STREET, —

Land® Trades
BUILDERS & DEVELOPERS
BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar